ಡಿಸೆಂಬರ್ 2018, ಸಂಚಿಕೆ 4

*Magazine on Low External Input Sustainable Agriculture*
*Compilation of selected translated articles into Kannada*

ಬಾಹ್ಯ ಪರಿಕರಗಳ ಮಿತ ಬಳಕೆಯ ಸುಸ್ಥಿರ ಕೃಷಿ ಕುರಿತ ಮ್ಯಾಗಜಿನ್.
ಕನ್ನಡಕ್ಕೆ ಅನುವಾದಿಸಿದ ಆಯ್ದ ಲೇಖನಗಳ ಸಂಕಲನ

# LEISA INDIA

# ಲೀಸಾ ಇಂಡಿಯ

ವಿಶೇಷ ಕನ್ನಡ ಸಂಚಿಕೆ



# ಲೀಸಾ ಇಂಡಿಯ

**ವಿಶೇಷ ಕನ್ನಡ ಸಂಚಿಕೆ**

**ಡಿಸೆಂಬರ್ 2018, ಸಂಚಿಕೆ 4**

ಈ ಸಂಚಿಕೆಯು 'ಲೀಸಾ ಇಂಡಿಯ' ಆಂಗ್ಲ ಆವೃತ್ತಿಯಲ್ಲಿ ಪ್ರಕಟವಾದ ಆಯ್ದ ಲೇಖನಗಳ ಅನುವಾದಗಳನ್ನು ಒಳಗೊಂಡಿದೆ.



**ವಿಳಾಸ:** ಎ.ಎಂ.ಇ. ಪ್ರತಿಷ್ಠಾನ
ನಂ.204, 100 ಫೀಟ್ ರಿಂಗ್‌ರೋಡ್
ಮೂರನೇ ಫ್ಲೇಸ್
ಬನಶಂಕರಿ ಎರಡನೇ ಬ್ಲಾಕ್
ಮೂರನೇ ಸ್ಟೇಜ್
ಬೆಂಗಳೂರು 560085
ದೂರವಾಣಿ+91–080–26699512/ 26699522
ಫ್ಯಾಕ್ಸ್ +91–080–26699410
ಈಮೈಲ್: leisaindia@yahoo.co.in



**ಲೀಸಾ ಇಂಡಿಯ**

'ಲೀಸಾ ಇಂಡಿಯ' ಆಂಗ್ಲ ಆವೃತ್ತಿಯನ್ನು ಎ.ಎಂ.ಇ. ಪ್ರತಿಷ್ಠಾನ ಹಾಗೂ ಇಳೆಯ (ILEIA) ಸಂಸ್ಥೆ ಸಹಯೋಗದೊಂದಿಗೆ ತ್ರೈಮಾಸಿಕವಾಗಿ ಪ್ರಕಟಿಸುತ್ತಿದೆ.

**ಸಂಪಾದಕೀಯ ಮಂಡಳಿ**

**ಮುಖ್ಯ ಸಂಪಾದಕ :** ಕೆ.ವಿ.ಎಸ್.ಪ್ರಸಾದ್

**ವ್ಯವಸ್ಥಾಪಕ ಸಂಪಾದಕಿ :** ಟಿ.ಎಂ.ರಾಧ

**ಕನ್ನಡ ಅನುವಾದ**
ಹೇಮಾ ಹೆಬ್ಬಗೋಡಿ

**ಕನ್ನಡ ಅನುವಾದಗಳ ಸಮನ್ವಯ**
ವೀಣಾ ಮಾರ್ಕಾಂಡೆ

**ಕಾರ್ಯ ನಿರ್ವಹಣೆ**
ರುಕ್ಮಿಣಿ ಜಿ.ಜಿ.

**ಪುಟ ವಿನ್ಯಾಸ**
ಶಿವಪ್ರಸಾದ್

**ಮುದ್ರಣ**
ಸ್ವಾನ್ ಪ್ರಿಂಟ್, ಬೆಂಗಳೂರು

**ಮುಖಪುಟ ಚಿತ್ರ**
ತಾವು ಬೆಳೆದ ಬೆಳೆಯೊಂದಿಗೆ ಸಂತಸದಿಂದಿರುವ ರೈತಾಪಿ ದಂಪತಿಗಳು

**ಚಿತ್ರ ಸೌಜನ್ಯ:** ಧನ್ ಫೌಂಡೇಷನ್

## ಲೀಸಾ ಮ್ಯಾಗಜೀನ್

**ವಿವಿಧ ಆವೃತ್ತಿಗಳು**

ಲ್ಯಾಟಿನ್ ಅಮೇರಿಕನ್, ಪಶ್ಚಿಮ ಆಫ್ರಿಕನ್ ಮತ್ತು ಬ್ರೆಜಿಲಿಯನ್ ಆವೃತ್ತಿಗಳು

## ಲೀಸಾ ಇಂಡಿಯ ಮ್ಯಾಗಜೀನ್

**ಇತರೆ ಪ್ರಾದೇಶಿಕ ಆವೃತ್ತಿಗಳು**

ಹಿಂದಿ, ಒರಿಯಾ, ಮರಾಠಿ, ಪಂಜಾಬಿ, ತಮಿಳು ಮತ್ತು ತೆಲುಗು



**ಈ ಸಂಚಿಕೆಯಲ್ಲಿ ಪ್ರಕಟವಾದ ವಿಷಯಗಳನ್ನು ಎಲ್ಲಾ ರೀತಿಯ ಎಚ್ಚರಿಕೆಯಿಂದ ಪರಿಶೀಲಿಸಿ ಸಾಧ್ಯವಾದಷ್ಟು ಸರಿಯಾಗಿ ನೀಡಲು ಪ್ರಯತ್ನಿಸಲಾಗಿದೆ. ಹೀಗಿದ್ದೂ, ಅಂತಿಮವಾಗಿ ಇಲ್ಲಿ ಪ್ರಕಟವಾದ ಲೇಖನಗಳಲ್ಲಿರುವ ವಿಷಯಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಇಲ್ಲಿ ಪ್ರಕಟವಾದ ಲೇಖನಗಳ ಪಡಿಯಚ್ಚನ್ನು ಮಾಡಿ ಇತರ ಓದುಗರಿಗೆ ಹಂಚಲು ಸಂಪಾದಕೀಯ ಮಂಡಳಿಯ ಒಪ್ಪಿಗೆಯಿದೆ.**



**ಮಿಸೆರಿಯೊರ್ ನೆರವಿನೊಂದಿಗೆ ಎ.ಎಂ.ಇ. ಪ್ರತಿಷ್ಠಾನದಿಂದ ಪ್ರಕಟಿತ.**


# ಪ್ರಿಯ ಓದುಗರೇ.

**ಬೆಳೆ ಬೆಳೆಯುವಿಕೆಯು ಹಲವು ಸವಾಲುಗಳನ್ನು ಎದುರಿಸುತ್ತಿದ್ದು ಹವಾಮಾನ ಬದಲಾವಣೆಗಳು ಇದರ ಮೇಲೆ ಮತ್ತಷ್ಟು ಪ್ರತಿಕೂಲ ಪರಿಣಾಮಗಳನ್ನುಂಟುಮಾಡಿವೆ. ಪ್ರಸ್ತುತ ಸಂಚಿಕೆಯು ಈ ರೀತಿಯಲ್ಲಿ ಬದಲಾಗುತ್ತಿರುವ ಹವಾಮಾನ ಪರಿಸ್ಥಿತಿಗಳ ನಡುವೆ ರೈತರು ಹೇಗೆ ಬೆಳೆ ಬೆಳೆಯುತ್ತಿದ್ದಾರೆ ಎನ್ನುವುದರ ಕುರಿತು ಗಮನಕೇಂದ್ರೀಕರಿಸಿದೆ.**

**ಹವಾಮಾನ ಬದಲಾವಣೆಯ ಪರಿಸ್ಥಿತಿಯಲ್ಲಿ ಸುಧಾರಿತ ಬೇಸಾಯ ಪದ್ಧತಿಗಳ ಅನುಸರಣೆ ಮತ್ತು ಒತ್ತಡವನ್ನು ತಾಳಿಕೊಳ್ಳಬಲ್ಲ ತಳಿಗಳನ್ನು ಬೆಳೆಯುವುದರಿಂದ ಸುಸ್ಥಿರ ಉತ್ಪಾದನೆಯನ್ನು ಕಾಯ್ದುಕೊಳ್ಳಬಹುದಾಗಿದೆ. ಕೊರಪುಟ್ ಪ್ರದೇಶದ ಬುಡಕಟ್ಟು ರೈತರು ಸಿರಿಧಾನ್ಯಗಳನ್ನು ಹೆಚ್ಚು ಬೆಳೆಯುವ ಪದ್ಧತಿಯನ್ನು ಅನುಸರಿಸಿದ್ದರಿಂದ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳ ನಡುವೆಯೂ ರಾಗಿ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಯಿತು. ಮಹಾರಾಷ್ಟ್ರದ ಸಮುದಾಯಗಳು ದೇಸಿ ತಳಿಗಳು ಬರತಾಳಿಕೊಳ್ಳುವ ಶಕ್ತಿ, ರೋಗನಿರೋಧಕ ಗುಣ ಹಾಗೂ ಕೀಟಬಾಧೆಗೆ ಹೆಚ್ಚಾಗಿ ತುತ್ತಾಗದಿರುವ ಗುಣ ಹೊಂದಿರುವುದನ್ನು ಅರಿತು ಅವುಗಳನ್ನು ಸಂರಕ್ಷಿಸಿ ಬೆಳೆಯುವ ಮೂಲಕ ಆಹಾರ ಸಾರ್ವಭೌಮತ್ವವನ್ನು ಸಾಧಿಸಿದರು. ರಾಜಸ್ಥಾನದ ಕೆರ್ವಾವಾಲ್ ಪಂಚಾಯ್ತಿಯಲ್ಲಿ ಸಜ್ಜೆಯನ್ನು ಪುನಶ್ಚೇತನಗೊಳಿಸಿದ್ದರಿಂದ ಹೆಚ್ಚು ಆಹಾರ ಮತ್ತು ಮೇವು ಸಿಕ್ಕಿತಲ್ಲದೆ ತಮ್ಮ ಸಾಂಪ್ರದಾಯಿಕ ಸಂಸ್ಕೃತಿಯೊಂದಿಗೆ ಮತ್ತೆ ಸಂಬಂಧವನ್ನು ಬೆಸೆದುಕೊಳ್ಳಲು ಸಾಧ್ಯವಾಯಿತು.**

**ಹೊಸತನದ ಆವಿಷ್ಕಾರದಲ್ಲಿ ತೊಡಗಿರುವ ತಮಿಳುನಾಡಿನ ಭಾಸ್ಕರನ್ ಅವರಂತಹ ಹಲವು ರೈತರು ಬದಲಾಗುತ್ತಿರುವ ಹವಾಮಾನ ಪರಿಸ್ಥಿತಿಗಳ ನಡುವೆ ಬೇಸಾಯ ಪದ್ಧತಿಗಳಲ್ಲಿ ಪರಿವರ್ತನೆಯನ್ನು ತಂದುಕೊಳ್ಳುವ ಮೂಲಕ ಕೃಷಿಯಲ್ಲಿ ಸ್ಥಿರತೆಯನ್ನು ಕಂಡುಕೊಂಡಿದ್ದಲ್ಲದೆ ಆಹಾರ ಭದ್ರತೆಯನ್ನು ಕಂಡುಕೊಂಡಿದ್ದಾರೆ. ಅದೇ ರೀತಿ ರೈತರಾಗಿದ್ದು ಈಗ ಉದ್ಯಮಿಯಾಗಿರುವ ಶ್ರೀ ಶೆಟ್ಟಿಯವರು ಸಿರಿಧಾನ್ಯಗಳಿಂದ ರೆಡಿ ಟು ಈಟ್ ಫುಡ್ ತಯಾರಿಸುತ್ತಿದ್ದಾರೆ ಹಾಗೂ ರೈತರಿಗೆ ಈ ಕುರಿತು ತರಬೇತಿ ನೀಡುತ್ತಿದ್ದಾರೆ. ಈ ರೀತಿಯ ತಳಮಟ್ಟದ ಪ್ರಯತ್ನಗಳಿಗೆ ಸಾಂಸ್ಥಿಕ ಹಾಗೂ ನೀತಿಗಳ (policy) ಬೆಂಬಲ ಕೂಡ ಬೇಕು.**

**ನಿಮ್ಮ ಪ್ರತಿಕ್ರಿಯೆಗಳ ನಿರೀಕ್ಷೆಯಲ್ಲಿದ್ದೇವೆ. ನಿಮ್ಮ ಯಾವುದೇ ಕೃಷಿಮಿತ್ರರು ಈ ಪತ್ರಿಕೆಯನ್ನು ಓದಬೇಕೆಂದು ನೀವು ಬಯಸಿದಲ್ಲಿ ಅವರ ಸಂಪೂರ್ಣ ವಿಳಾಸವನ್ನು ನಮಗೆ ಕಳಿಸಿಕೊಡಿ. ಅವರಿಗೆ ಸಂಚಿಕೆಯನ್ನು ಕಳಿಸಿಕೊಡಲು ನಮಗೆ ಸಂತಸವಾಗುತ್ತದೆ.**

**ಸಂಪಾದಕರು**

# ಲೀಸಾ LEISA

www.leisaindia.org

ಲೀಸಾ (LEISA)ವು ಬಾಹ್ಯ ಪರಿಕರಗಳ ಮಿತ ಬಳಕೆಯ ಸುಸ್ಥಿರ ಕೃಷಿಯ ಕುರಿತಾಗಿದೆ. ಇದು ಪಾರಿಸರಿಕವಾಗಿ ಯೋಗ್ಯವಾದ ವಿಧಾನದಲ್ಲಿ ತಮ್ಮ ಉತ್ಪಾದಕತೆ ಮತ್ತು ವರಮಾನವನ್ನು ಹೆಚ್ಚಿಸಿಕೊಳ್ಳಲು ಬಯಸುವ ರೈತರಿಗೆ ಇರುವ ತಾಂತ್ರಿಕ ಮತ್ತು ಸಾಮಾಜಿಕ ಆಯ್ಕೆಗಳ ಕುರಿತಾಗಿದೆ. ಲೀಸಾವು ಸ್ಥಳೀಯ ಸಂಪನ್ಮೂಲ ಮತ್ತು ನೈಸರ್ಗಿಕ ವಿಧಾನಗಳ ಹಿತ ಬಳಕೆಯ – ಒಂದೊಮ್ಮೆ ಅಗತ್ಯವೆನಿಸಿದರೆ ಬಾಹ್ಯ ಒಳಸುರಿಗಳ ಸುರಕ್ಷಿತ ಮತ್ತು ದಕ್ಷ ಬಳಕೆಯ – ಕುರಿತಾಗಿದೆ. ಇದು ತಮ್ಮ ಸ್ವಂತ ಜ್ಞಾನ, ಕೌಶಲ್ಯ, ಮೌಲ್ಯ, ಸಂಸ್ಕೃತಿ ಮತ್ತು ಸಂಸ್ಥೆಗಳನ್ನು ಮೂಲವಾಗಿಸಿಕೊಂಡು ಭವಿಷ್ಯವನ್ನು ಕಟ್ಟಿಕೊಳ್ಳಲು ಬಯಸುವ ಪುರುಷ ಮತ್ತು ಮಹಿಳಾ ರೈತರನ್ನು ಸಬಲರನ್ನಾಗಿಸುವುದು ಮತ್ತು ಸಮುದಾಯಗಳ ಕುರಿತಾಗಿದೆ. ಲೀಸಾವು ಕೃಷಿಯನ್ನು ಸುಧಾರಿಸುವ ಮತ್ತು ಅದನ್ನು ಬದಲಾಗುತ್ತಿರುವ ಅಗತ್ಯ ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಹೊಂದಿಸುವ ಕೃಷಿಕರು ಮತ್ತು ಇತರೆ ಪಾತ್ರಧಾರಿಗಳ ಸಾಮರ್ಥ್ಯವನ್ನು ಬಲಪಡಿಸುವ ಭಾಗೇದಾರಿ ವಿಧಾನಗಳ ಕುರಿತಾಗಿದೆ. ಲೀಸಾವು ದೇಸಿ ಮತ್ತು ವೈಜ್ಞಾನಿಕ ಜ್ಞಾನವನ್ನು ಮಿಳಿತಗೊಳಿಸಲು ಬಯಸುತ್ತದೆ ಮತ್ತು ಈ ಕುರಿತ ಹೆಚ್ಚಿನ ಬೆಳವಣಿಗೆಗೆ ಅನುಕೂಲಕರ ವಾತಾವರಣವನ್ನು ಸೃಜಿಸಲು ನೀತಿ ನಿರೂಪಣೆಯ ಮೇಲೆ ಪ್ರಭಾವ ಬೀರಬಯಸುತ್ತದೆ. ಲೀಸಾವು ಒಂದು ಪರಿಕಲ್ಪನೆಯಾಗಿದೆ; ಒಂದು ಮಾರ್ಗ ಮತ್ತು ಒಂದು ರಾಜಕೀಯ ಸಂದೇಶವಾಗಿದೆ.

# ಎ ಎಂ ಇ ಪ್ರತಿಷ್ಠಾನ

www.amefound.org

ಎ ಎಂ ಇ ಪ್ರತಿಷ್ಠಾನವು ಬೇಸಾಯದ ಪರ್ಯಾಯಗಳನ್ನು ರೂಪಿಸುವ, ಕೃಷಿಕರ ಅರಿವನ್ನು ಸಿರಿವಂತಗೊಳಿಸುವ, ಅಭ್ಯುದಯ ಸಂಸ್ಥೆಗಳನ್ನು ಒಗ್ಗೂಡಿಸುವ ಮತ್ತು ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ದಕ್ಷಿಣ ಪ್ರಸ್ಥಭೂಮಿಯ ಅರೆ ಒಣ ಪ್ರದೇಶಗಳ ಸಣ್ಣ ಮತ್ತು ಮಧ್ಯಮ ಕೃಷಿಕರಲ್ಲಿ ಪಾರಿಸರಿಕ ಕೃಷಿಯನ್ನು ಉತ್ತೇಜಿಸುತ್ತಿದೆ.


**ವಿಶ್ವಸ್ಥರು**

**ಚೇರ್ಮನ್** : ಶ್ರೀ ಚಿರಂಜೀವಿ ಸಿಂಗ್, ಐ.ಎ.ಎಸ್. (ನಿ.)

**ಖಜಾಂಚಿ** : ಶ್ರೀ ಬಿ.ಕೆ. ಶಿವರಾಂ

**ಸದಸ್ಯರು** : ಡಾ.ವಿಠಲ ರಾಜನ್, ಡಾ.ಎಂ.ಮಹಾದೇವಪ್ಪ, ಡಾ.ಎನ್.ಜಿ.ಹೆಗಡೆ, ಡಾ.ಟಿ.ಎಂ. ತ್ಯಾಗರಾಜನ್, ಪ್ರೊ.ವಿ.ವೀರಭದ್ರಯ್ಯ, ಡಾ.ಎ.ರಾಜಣ್ಣ, ಡಾ.ವೆಂಕಟೇಶ್ ತಗತ್, ಡಾ.ಸ್ಮಿತಾ ಪ್ರೇಮಚಂದರ್, ಶ್ರೀ ಅಶೋಕ್ ಚಟರ್ಜಿ

**ಕಾರ್ಯಕಾರಿ ನಿರ್ದೇಶಕರು:** ಶ್ರೀ ಕೆ.ವಿ.ಎಸ್. ಪ್ರಸಾದ್


# ಮಿಸೆರಿಯೊರ್ MISEREOR

www.misereor.org

ಅಭಿವೃದ್ಧಿ ಸಹಕಾರ ಸಂಘಟನೆ ಮಿಸೆರಿಯೊರ್‌ನ್ನು ಜರ್ಮನ್ ಕ್ಯಾಥೋಲಿಕ್ ಬಿಶಪ್‌ರು ಇಸವಿ 1958ರಲ್ಲಿ ಸ್ಥಾಪಿಸಿದರು. ಕಳೆದ 50 ವರ್ಷಗಳಿಂದ ಮಿಸೆರಿಯೊರ್ ಆಫ್ರಿಕ, ಏಷಿಯಾ, ಹಾಗೂ ಲ್ಯಾಟಿನ್ ಅಮೇರಿಕಾಗಳಲ್ಲಿ ಬಡತನದ ವಿರುದ್ಧದ ಹೋರಾಟಕ್ಕೆ ವಚನಬದ್ಧವಾಗಿದೆ. ಧರ್ಮ, ಪರಂಪರೆ ಅಥವಾ ಲಿಂಗವನ್ನು ಪರಿಗಣಿಸದೆ ಅಗತ್ಯವಿರುವ ಯಾವುದೇ ಮಾನವ ಜೀವಿಗೂ ಮಿಸೆರಿಯೊರ್‌ನ ಸಹಕಾರ ಲಭ್ಯವಿದೆ.

ಬಡವರು ಮತ್ತು ಅನುಕೂಲರಹಿತರು ನಡೆಸುವ ಮತ್ತು ಮಾಲೀಕತ್ವದ ಯೋಜನೆಗಳಿಗೆ ಮಿಸೆರಿಯೊರ್ ಬೆಂಬಲ ಲಭ್ಯವಿದೆ. ಇದು ಸ್ಥಳೀಯ ಪಾಲುಗಾರರ ಜೊತೆ ಕೆಲಸ ಮಾಡಲು ಮೊದಲ ಆದ್ಯತೆ ನೀಡುತ್ತದೆ. ಅವುಗಳೆಂದರೆ ಚರ್ಚ್–ಆಧಾರಿತ ಸಂಸ್ಥೆಗಳು, ಸರಕಾರೇತರ ಸಂಸ್ಥೆಗಳು, ಸಾಮಾಜಿಕ ಚಳುವಳಿಗಳು ಮತ್ತು ಸಂಶೋಧನ ಸಂಸ್ಥೆಗಳು. ಯೋಜನೆಗಳ ಅನುಷ್ಠಾನ ಮತ್ತು ಸ್ಥಳೀಯ ಅಭಿವೃದ್ಧಿ ಪ್ರಕ್ರಿಯೆಯನ್ನು ರಚಿಸುವಲ್ಲಿ ಫಲಾನುಭವಿಗಳ ಜೊತೆಗೂಡಿ ಪಾಲುಗಾರರು ಸಹಾಯಮಾಡುವಲ್ಲಿ ತೊಡಗಿಸಿಕೊಂಡಿದ್ದಾರೆ. ಈ ರೀತಿಯಾಗಿ ಮಿಸೆರಿಯೊರ್ ತನ್ನ ಪಾಲುಗಾರರೊಡಗೂಡಿ ನಿರಂತರವಾಗಿ ಬದಲಾಗುತ್ತಿರುವ ಸವಾಲುಗಳಿಗೆ ಪ್ರತಿಸ್ಪಂದಿಸುತ್ತದೆ.

# ವಿಷಯಸೂಚಿ




## ದೇಸಿ ತಳಿಯ ಬೀಜಗಳ ಲಭ್ಯತೆ – ಆಹಾರ ಸಾರ್ವಭೌಮತ್ವದತ್ತ ಹೆಜ್ಜೆ

■ **ಲೀಲೇಶ್‌ಎನ್‌ಚವನ್, ಹರೇಶ್ವರ್ ಬಿ ಮಾಗರೆ ಮತ್ತು ಸುಧೀರ್ ಎಂ ವಾಗ್ಲೆ**

ಮಹಾರಾಷ್ಟ್ರದ ಬುಡಕಟ್ಟು ಪ್ರದೇಶಗಳಲ್ಲಿನ ರೈತರು ತಮ್ಮ ಸಾಂಪ್ರದಾಯಿಕ ದೇಸಿ ತಳಿಗಳನ್ನು ಸಂರಕ್ಷಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಆಹಾರಸಾರ್ವಭೌಮತ್ವವನ್ನು ಸಾಧಿಸಿದ್ದಾರೆ. ರೈತರು ಸ್ಥಳೀಯವಾಗಿ ಲಭ್ಯವಿರುವ ದೇಸಿ ಬೀಜಗಳ ಕುರಿತು ಅರಿತುಕೊಂಡಿದ್ದಾರೆ ಮತ್ತು ಅವರ ಆಯ್ಕೆಯ ಬೀಜಗಳು ಅವರಿಗೆ ಸಿಗುತ್ತಿವೆ.

**4**



## ಕೃಷಿಯ ಹೊಸರೂಪ ಹವಾಮಾನ ವೈಪರೀತ್ಯಗಳಿಗೊಂದು ಪ್ರತಿಕ್ರಿಯೆ

■ **ಸುರೇಶ್‌ಕಣ್ಣ ಕೆ.**

ಬದಲಾಗುತ್ತಿರುವ ಹವಾಮಾನ ಪರಿಸ್ಥಿತಿಗಳಲ್ಲಿ ಹೊಸದಾರಿಗಳನ್ನು ಹುಡುಕುತ್ತಿರುವ ರೈತರು ಕೃಷಿ ವ್ಯವಸ್ಥೆಯನ್ನು ಬದಲಾಯಿಸಿ, ಹೊಸದಿಕ್ಕಿನತ್ತ ತಿರುಗಿ, ಕೃಷಿಗೆ ಚೇತರಿಕೆಯನ್ನು ಒದಗಿಸುವ ಮೂಲಕ ಆಹಾರ ಭದ್ರತೆಯನ್ನು ಕಂಡುಕೊಳ್ಳುತ್ತಿರುವ ಪ್ರಕ್ರಿಯೆಯಲ್ಲಿದ್ದಾರೆ. ಇಂತಹ ತಳಮಟ್ಟದ ಅನ್ವೇಷಣೆಗಳನ್ನು ಗುರುತಿಸಿ ಸೂಕ್ತ ಸಾಂಸ್ಥಿಕ ಮತ್ತು ನೈತಿಕ ಬೆಂಬಲವನ್ನು ನೀಡಬೇಕು.

**8**



## ರಾಗಿ ಉತ್ಪಾದನೆಯಲ್ಲಿ ಹೆಚ್ಚಳ ಕೃಷಿ – ಪರಿಸರ ವಿಜ್ಞಾನದ ಹೊಸ ಆವಿಷ್ಕಾರ

■ **ಲೂನಾ ಪಾಂಡಾ ಮತ್ತು ಮುರಳೀಧರ ಅಧಿಕಾರಿ**

ಕೃಷಿ ಉತ್ಪಾದನೆಗಳು ಹಲವಾರು ಜೈವಿಕ, ಅಜೈವಿಕ ಒತ್ತಡಗಳಿಗೆ ಸಿಲುಕುತ್ತವೆ. ಹವಾಮಾನದಲ್ಲುಂಟಾಗುವ ಬದಲಾವಣೆಗಳು ಬೆಳೆಗಳ ಉತ್ಪಾದನೆಯ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನು ಉಂಟುಮಾಡುತ್ತವೆ. ಬದಲಾಗುತ್ತಿರುವ ಹವಾಮಾನ ಪರಿಸ್ಥಿತಿಯಲ್ಲಿ ಸುಧಾರಿತ ಕೃಷಿಪದ್ಧತಿಗಳನ್ನು ಅನುಸರಿಸಿ ಒತ್ತಡವನ್ನು ತಾಳಿಕೊಳ್ಳಬಲ್ಲ ಬೆಳೆಗಳನ್ನು ಬೆಳೆಯುವುದರಿಂದ ಉತ್ಪಾದನೆಯಲ್ಲಿ ಸ್ಥಿರತೆಯನ್ನು ಕಾಪಾಡಿಕೊಳ್ಳಬಹುದು. ಸಿರಿಧಾನ್ಯಗಳನ್ನು ಹೆಚ್ಚಾಗಿ ಬೆಳೆಯುವುದು ಸ್ಥಿರತೆಯನ್ನು ಸಾಧಿಸುವ ಒಂದು ವಿಧಾನ. ಹಾಗಾಗಿ ಇತ್ತೀಚೆಗೆ ರಾಗಿಯ ಉತ್ಪಾದನೆ ಹೆಚ್ಚಿದೆ. ತೀವ್ರ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಲ್ಲೂ ಕೊರಪುಟ್ ಬುಡಕಟ್ಟು ಕುಟುಂಬಗಳಿಗೆ ಆಹಾರ ಮತ್ತು ಪೌಷ್ಟಿಕಾಂಶ ಭದ್ರತೆಯನ್ನು ಸಾಧಿಸಲು ಇದು ನೆರವಾಗಿದೆ.

**10**



## ಸಿರಿಧಾನ್ಯಗಳ ಪುನಶ್ಚೇತನದ ಮೂಲಕ ಸಂಸ್ಕೃತಿಯೊಂದಿಗೆ ಬೆಸುಗೆ

■ **ಅಮನ್ ಸಿಂಗ್ ಮತ್ತು ಪ್ರತಿಭಾ ಸಿಸೊಡಿಯ**

ರಾಜಸ್ಥಾನದ ಕೆರ್ವಾವಾಲ್ ಪಂಚಾಯ್ತಿಗೆ ಸೇರಿದ ರೈತರು ಸಜ್ಜೆಯಾಧಾರಿತ ಬೆಳೆ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸಿ ಅನುಸರಿಸುವುದರಿಂದ ನೀರಿಲ್ಲದೇ ಒಣಗುವ ಹತ್ತಿ, ಈರುಳ್ಳಿ ಮತ್ತು ಗೋಧಿ ಬೆಳೆಗಳಿಂದ ಮುಕ್ತಿ ಹೊಂದಬಹುದು ಎನ್ನುವುದನ್ನು ಕಂಡುಕೊಂಡರು. ಸಿರಿಧಾನ್ಯಗಳನ್ನು ಬೆಳೆಯುವ ಕ್ರಮವನ್ನು ಪುನಶ್ಚೇತನಗೊಳಿಸಿದ್ದರಿಂದ ಅವರಿಗೆ ಆಹಾರ ಮತ್ತು ಮೇವು ಎರಡೂ ಸಿಗುವಂತಾಯಿತು. ಇದರೊಂದಿಗೆ ಸಜ್ಜೆಯನ್ನು ಕೇಂದ್ರವಾಗಿಟ್ಟುಕೊಂಡ ತಮ್ಮ ಸಾಂಪ್ರದಾಯಿಕ ಸಂಸ್ಕೃತಿಯೊಂದಿಗೆ ಈ ರೈತ ಕುಟುಂಬಗಳು ಮತ್ತೆ ಸಂಬಂಧ ಬೆಸೆದುಕೊಳ್ಳುವಂತಾಯಿತು.

**14**



## ಇವರೇ ನೋಡಿ ಸಿರಿಧಾನ್ಯಗಳ ಸಿರಿವಂತ

■ **ಅಮಿತ್‌ಚಕ್ರವರ್ತಿ**

ಸಿರಿಧಾನ್ಯಗಳ ಬಗ್ಗೆ ಗ್ರಾಹಕರಿಗೆ ಹೆಚ್ಚಿನ ಅರಿವಿಲ್ಲ. ಇವುಗಳಿಗೆ ಬೇಡಿಕೆ ಕಡಿಮೆ, ಲಾಭವೂ ಕಡಿಮೆ. ಸಂಶೋಧನಾ ಸಂಸ್ಥೆಗಳಿಗೆ ಹಾಗೂ ವಾಣಿಜ್ಯ ಸಂಸ್ಥೆಗಳಿಗೆ ಕೂಡಾ ಇವುಗಳ ಬಗೆಗಿನ ಆಸಕ್ತಿ ವಿರಳವೆಂದೇ ಹೇಳಬಹುದು. ಸಿರಿಧಾನ್ಯಗಳಲ್ಲಿ ಹೆಚ್ಚಿನ ಪೌಷ್ಟಿಕಾಂಶಗಳಿವೆ, ಪ್ರತಿಕೂಲ ಹವಾಮಾನ ಪರಿಸ್ಥಿತಿಯಲ್ಲಿ ಕೂಡ ರೈತರು ಇವುಗಳನ್ನು ಬೆಳೆಯಬಹುದು. ಇಷ್ಟೆಲ್ಲ ಅನುಕೂಲಗಳಿದ್ದರೂ ಇವುಗಳ ಬಗ್ಗೆ ಆಸಕ್ತಿಯಿಲ್ಲದಿರುವುದು ಅಚ್ಚರಿಯ ಸಂಗತಿ.

**18**




ಚಿತ್ರ : ಲೇಖಕರು

*ಜೈವಿಕ ವೈವಿಧ್ಯತೆಯ ಪ್ರದರ್ಶನ*

# ದೇಸಿ ತಳಿಯ ಬೀಜಗಳ ಲಭ್ಯತೆ – ಆಹಾರ ಸಾರ್ವಭೌಮತ್ವದತ್ತ ಹೆಜ್ಜೆ

■ ಲೀಲೇಶ್ ಎನ್ ಚವನ್, ಹರೇಶ್ವರ್ ಬಿ ಮಾಗರೆ ಮತ್ತು ಸುಧೀರ್ ಎಂ ವಾಗ್ಲೆ

**ಮಹಾರಾಷ್ಟ್ರದ ಬುಡಕಟ್ಟು ಪ್ರದೇಶಗಳಲ್ಲಿನ ರೈತರು ತಮ್ಮ ಸಾಂಪ್ರದಾಯಿ ದೇಸಿ ತಳಿಗಳನ್ನು ಸಂರಕ್ಷಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಆಹಾರಸಾರ್ವಭೌಮತ್ವವನ್ನು ಸಾಧಿಸಿದ್ದಾರೆ. ರೈತರು ಸ್ಥಳೀಯವಾಗಿ ಲಭ್ಯವಿರುವ ದೇಸಿ ಬೀಜಗಳ ಕುರಿತು ಅರಿತುಕೊಂಡಿದ್ದಾರೆ ಮತ್ತು ಅವರ ಆಯ್ಕೆಯ ಬೀಜಗಳು ಅವರಿಗೆ ಸಿಗುತ್ತಿವೆ.**

ಬೆಳೆಗಳಲ್ಲಿನ ತಳಿ ವೈವಿಧ್ಯತೆಯು ರೈತರ ಬದುಕಿಗೆ ಸುಸ್ಥಿರತೆಯನ್ನು ಒದಗಿಸುತ್ತದೆ. ಅದರಲ್ಲೂ ಪ್ರಾಕೃತಿಕ ಹವಾಮಾನ ವೈಪರೀತ್ಯಗಳು ಮತ್ತು ಆರ್ಥಿಕ ಒತ್ತಡವಿರುವಂತಹ ಸೂಕ್ಷ್ಮ ಪ್ರದೇಶಗಳಲ್ಲಿ ಇದು ತುಂಬಾ ಅಗತ್ಯ. ನೈಸರ್ಗಿಕ ಮತ್ತು ಕೃಷಿ ಪರಿಸ್ಥಿತಿಗಳಿಗೆ ಹೊಂದುವಂತಹ ಸ್ಥಳೀಯವಾಗಿ ದೊರಕುವ ಬೆಳೆಗಳ ದೇಸಿ ತಳಿಗಳನ್ನು ಅಭಿವೃದ್ಧಿಪಡಿಸಿ ಸಂರಕ್ಷಿಸಿರುವ ಶ್ರಮದ ಹಿಂದೆ ಅಲ್ಲಿನ ರೈತರ ನೂರಾರು ವರ್ಷಗಳ ಪರಿಶ್ರಮವಿದೆ. ಧಾನ್ಯಗಳು, ಬೇಳೆಕಾಳುಗಳು, ಎಣ್ಣೆ ಕಾಳುಗಳು, ಸೇವಿಸಲು ಯೋಗ್ಯವಾದ ಗೆಡ್ಡೆ ಗೆಣಸುಗಳು, ಸ್ಥಳೀಯ ಗಿಡಮೂಲಿಕೆಗಳು ಇವೆಲ್ಲವೂ ದೇಸಿಕೃಷಿಯಲ್ಲಿ ಸೇರುತ್ತವೆ. ಇವು ಉತ್ತಮ ಪೌಷ್ಟಿಕಾಂಶ ಮೂಲಗಳಾಗಿದ್ದು ಬುಡಕಟ್ಟು ಮತ್ತು ಗ್ರಾಮೀಣ ಸಮುದಾಯಗಳಿಗೆ ಆಹಾರ ಭದ್ರತೆಯನ್ನು

ಒದಗಿಸುತ್ತವೆ. ಆದರೆ ಇವು ನಾಶವಾಗುತ್ತಿವೆ ಎಂಬುದು ಖೇದದ ಸಂಗತಿ. ರೈತರು ಹೆಚ್ಚಿನ ಇಳುವರಿಯನ್ನು ಪಡೆಯುವ ಸಲುವಾಗಿ ಅಭಿವೃದ್ಧಿಗೊಳಿಸಿದ ತಳಿಗಳ ಬೀಜಗಳನ್ನೇ ಹೆಚ್ಚಾಗಿ ಕೃಷಿಗೆ ಬಳಸುತ್ತಿದ್ದಾರೆ. ಇದರಿಂದಾಗಿ ರೈತರು ಈ ಬೀಜಗಳ ಪೂರೈಕೆಗೆ ಹೊರಗಿನ ಏಜನ್ಸಿಗಳ ಮೇಲೆ ಅವಲಂಬಿತರಾಗಬೇಕಿದೆ. ಇದರೊಂದಿಗೆ ಹೆಚ್ಚಿನ ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳ ಬಳಕೆಯಿಂದ ಕೃಷಿಯ ವೆಚ್ಚವು ಹೆಚ್ಚಿದೆ. ಪರಿಸರದ ಸಹಜತೆಯ ಗುಣಮಟ್ಟವು ಕುಸಿದಿದ್ದು ಏಕಬೆಳೆ ಪದ್ಧತಿಯು ಜೈವಿಕ ವೈವಿಧ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ.

ಮಹಾರಾಷ್ಟ್ರದ ನಂದುರ್ಬಾರ್ ಜಿಲ್ಲೆಯಲ್ಲಿ ಬುಡಕಟ್ಟು ಜನಾಂಗದವರು ಹೆಚ್ಚು. ಅದರಲ್ಲೂ ಸತ್ಪುದ ಬೆಟ್ಟಪ್ರದೇಶದ ಧಡ್ಗಾಂವ್ ಮತ್ತು ಅಕ್ಕಲ್ಕುವ ಪ್ರದೇಶಗಳಲ್ಲಿ ಬುಡಕಟ್ಟು ಮತ್ತು ಗುಡ್ಡಗಾಡು ಸಮುದಾಯಗಳು ಹೆಚ್ಚಾಗಿ ವಾಸವಾಗಿವೆ.ಇವರಲ್ಲಿ ಭಿಲ್ ಮತ್ತು ಪವಾರ ಮುಖ್ಯ ಬುಡಕಟ್ಟುಗಳು. ಈ ಬುಡಕಟ್ಟು ಸಮುದಾಯದವರ ಬಳಿ ಸಣ್ಣ ಪ್ರಮಾಣದ ಭೂಮಿಯಿದ್ದು ಅವರೆಲ್ಲ ಬಡರೈತರು. ಕಡಿಮೆ ಇಳುವರಿಯ ಕಾರಣದಿಂದಾಗಿ ಇವರು ತಮ್ಮ ಬದುಕಿಗೆ ಕಾಡನ್ನು ಆಶ್ರಯಿಸಿದ್ದಾರೆ. ನಂದುರ್ಬಾರ್ ಜಿಲ್ಲೆಯು ಅಪರೂಪದ ಹಾಗೂ ವೈವಿಧ್ಯಮಯ ಸಾಂಪ್ರದಾಯಿಕ ದೇಸಿ ಬೆಳೆಗಳಿಗೆ ಹೆಸರುವಾಸಿ. ಮೆಕ್ಕೆಜೋಳ, ಜೋಳ, ಕಿರು ಧಾನ್ಯಗಳು, ಬೇಳೆಕಾಳುಗಳು ಮತ್ತು ಕಾಡಿನಲ್ಲಿ ಸಿಗುವ ತಿನ್ನಬಹುದಾದ ವಿವಿಧ ಗೆಡ್ಡೆಗೆಣಸುಗಳನ್ನು ಈ ಪ್ರದೇಶದಲ್ಲಿ ಅಧಿಕವಾಗಿ ಬಳಸಲಾಗುತ್ತದೆ. ಕಾಲಾನುಕ್ರಮದಲ್ಲಿ ಈ ಜೈವಿಕ ವೈವಿಧ್ಯವು ಅಳಿವಿನಂಚಿಗೆ ಬಂದು ನಿಂತಿದೆ.

ಜೈವಿಕ ವೈವಿಧ್ಯವು ಆಹಾರ ಹಾಗೂ ಬದುಕಿನ ಭದ್ರತೆಗೆ ತುಂಬಾ ಅತ್ಯವಶ್ಯಕ. ಇದು ಸಣ್ಣರೈತರಿಗೆ ಇದಿರಾಗಬಹುದಾದ ಕೃಷಿಸಂಬಂಧಿ ಸಮಸ್ಯೆಗಳನ್ನು, ಕಷ್ಟಗಳನ್ನು ತಗ್ಗಿಸುತ್ತವೆ. ಇದನ್ನು ಅರಿತುಕೊಂಡ ಃಂಖಈ ಎನ್ನುವ ಸ್ವಯಂಸೇವಾ ಸಂಸ್ಥೆಯೊಂದು ಇಲ್ಲಿನ ಸಮುದಾಯಗಳನ್ನೂ ಜೊತೆಗೆ ಸೇರಿಸಿಕೊಂಡು ಅರಣ್ಯಸಂರಕ್ಷಣೆ ಮತ್ತು ಬುಡಕಟ್ಟು ಆಹಾರ ಪುನರುಜ್ಜೀವನ ಯೋಜನೆಯನ್ನು ಹಮ್ಮಿಕೊಂಡಿದೆ. ಇದನ್ನು ನಂದುರ್ಬಾರ್ ಜಿಲ್ಲೆಯ ಧಡ್ಗಾಂವ್ ಮತ್ತು ಅಕ್ಕಲ್ಕುವ ಪ್ರದೇಶಗಳ 14 ಹಳ್ಳಿಗಳಲ್ಲಿ ಕೈಗೊಳ್ಳಲಾಗಿದೆ. ಇದರ ಉದ್ದೇಶಗಳು ಬೆಳೆಯ ವೈವಿಧ್ಯತೆಯನ್ನು ದಾಖಲಿಸುವುದು, ಸಾಂಪ್ರದಾಯಿಕ ಹಾಗೂ ದೇಸಿ ತಳಿಗಳ ವೈವಿಧ್ಯತೆಯನ್ನು ಕಾಪಾಡುವುದರೊಂದಿಗೆ ಆ ಕುರಿತ ಜ್ಞಾನವನ್ನು ಸ್ಥಳೀಯ ಸಮುದಾಯಗಳ ಸಹಭಾಗಿತ್ವದೊಂದಿಗೆ ಜನಪ್ರಿಯಗೊಳಿಸುವುದು.

## ಸಾಂಪ್ರದಾಯಿಕ ಹಾಗೂ ದೇಸಿ ತಳಿಗಳ ಸಂಗ್ರಹಣೆ ಹಾಗೂ ಸಂರಕ್ಷಣೆ

ಗ್ರಾಮ ಮಟ್ಟದಲ್ಲಿ ಕೃಷಿ ಸಭೆಗಳನ್ನು ಆಯೋಜಿಸಿ ಆ ಊರಿನ ಪ್ರಮುಖರು, ಪುರುಷರು ಮತ್ತು ಮಹಿಳೆಯರನ್ನು ಮಾತಾಡಿಸಿ ಅವರಿಂದ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲಾಯಿತು. ದಾಖಲಿಸಿದ ಮಾಹಿತಿ ಸರಿಯಿದೆಯೇ ಇಲ್ಲವೇ ಎಂದು ಪರಿಶೀಲಿಸಲು ಮತ್ತು ಇನ್ನಷ್ಟು ಹೆಚ್ಚಿನ ಮಾಹಿತಿ ಸಂಗ್ರಹಿಸಲು ಸರಣಿ ಗುಂಪು ಚರ್ಚೆಗಳನ್ನು ನಡೆಸಲಾಯಿತು. ಬೀಜಗಳ ಕುರಿತು ಹೆಚ್ಚಿನ ಮಾಹಿತಿ ಕಲೆಹಾಕಲು, ಬುಡಕಟ್ಟು ಸಂಸ್ಕೃತಿಯನ್ನು ತಿಳಿದುಕೊಳ್ಳಲು ಕೃಷಿ ಇಲಾಖೆಯ ಸಿಬ್ಬಂದಿಗಳು ಆ ಸಮುದಾಯಗಳ ಸಾಂಪ್ರದಾಯಿಕ ಹಬ್ಬಗಳ ಆಚರಣೆಯಲ್ಲಿ ಪಾಲ್ಗೊಂಡರು. ದೇಸಿ ಆಹಾರ ಬೆಳೆಗಳನ್ನು ಸಂರಕ್ಷಿಸಲು ಆಸಕ್ತರಾದ ಕುಟುಂಬಗಳ ಪಟ್ಟಿಯನ್ನು ತಯಾರಿಸಿದರು.

ಈ ಸಂದರ್ಭಗಳಲ್ಲಿ ಇಂದಿಗೂ ತಮಗಿರುವಷ್ಟೇ ತುಂಡು ಭೂಮಿಯಲ್ಲಿ ದೇಸಿ ತಳಿಗಳನ್ನು ಬೆಳೆಯುತ್ತಿರುವ ರೈತಕುಟುಂಬಗಳನ್ನು ಗುರುತಿಸಲಾಯಿತು. ಈ ರೈತರನ್ನು ಜೊತೆಗೆ ಸೇರಿಸಿಕೊಂಡು ಗ್ರಾಮಮಟ್ಟದ ದೇಸಿ ತಳಿಗಳ ಬೀಜಮೇಳವನ್ನು BAIFನವರು ಆಯೋಜಿಸಿದರು.

ಬೀಜಸಂರಕ್ಷಣಾ ವಿಧಾನಗಳನ್ನು ತಿಳಿದುಕೊಂಡಿದ್ದ ಐವರು ರೈತರನ್ನು ಆಯ್ಕೆಮಾಡಿ ಬೀಜಸಂರಕ್ಷಕರ ಗುಂಪುಗಳನ್ನು ರಚಿಸಿ, ಆ ಗುಂಪಿನ ಸದಸ್ಯರು ಸ್ಥಳೀಯವಾಗಿ ಲಭ್ಯವಿದ್ದ ಸಾಂಪ್ರದಾಯಿಕ ಹಾಗೂ ದೇಸಿ ತಳಿಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿಕೊಂಡರು. ಆರಂಭದಲ್ಲಿ 12 ಬಗೆಯ ಮೆಕ್ಕೆಜೋಳ ಮತ್ತು 9 ಬಗೆಯ ಜೋಳದ ತಳಿಗಳನ್ನು

**ಸಮುದಾಯಗಳು ಸಾಂಪ್ರದಾಯಿಕ ತಳಿಗಳು ಬರವನ್ನು ತಾಳಿಕೊಳ್ಳುವ ಗುಣ ಮತ್ತು ಕೀಟ ಹಾಗೂ ರೋಗಕ್ಕೆ ಅತಿಕಡಿಮೆ ತುತ್ತಾಗುವ ಗುಣ ಹೊಂದಿರುವುದನ್ನು ಕಂಡುಕೊಂಡರು.**

ಕೋಷ್ಟಕ 1: ಬೀಜ ಸಂರಕ್ಷಕ ಸಮಿತಿಯವರು ಸಂಗ್ರಹಿಸಿದ ಬೆಳೆಯ ಜೀವದ್ರವ್ಯ (Crop germplasm)

| ಬೆಳೆಯ ಹೆಸರು | ದೇಸಿ ತಳಿಗಳ ಸಂಖ್ಯೆ | ದೇಸಿ ತಳಿಗಳ ವಿಶೇಷತೆಗಳು |
|---|---|---|
| ರಾಗಿ | 01 | ದಪ್ಪಕಾಳು, ಸಿಹಿ ರುಚಿ, ಅಡ್ಡಬೀಳುವುದಿಲ್ಲ/ಬಾಗುವುದಿಲ್ಲ, ಹೆಚ್ಚು ಕೂಳೆಸಸಿಗಳು ಚಿಗುರುತ್ತವೆ, ಬರವನ್ನು ತಾಳಿಕೊಳ್ಳುವ ಗುಣ |
| ನವಣೆ | 03 | ಬಂಜರು/ಇಳಿಜಾರು ಪ್ರದೇಶಗಳಲ್ಲೂ ಸುಲಭವಾಗಿ ಬೆಳೆಯಬಹುದು, ಕೀಟಬಾಧೆಯ ಭಯವಿಲ್ಲ, ಉತ್ತಮಗುಣಮಟ್ಟ, ಪೌಷ್ಟಿಕಾಂಶ ಹೆಚ್ಚು |
| ಊದಲು | 06 | ಬಂಜರು/ಇಳಿಜಾರು ಪ್ರದೇಶಗಳಲ್ಲೂ ಸುಲಭವಾಗಿ ಬೆಳೆಯಬಹುದು, ಕೀಟಬಾಧೆಯ ಭಯವಿಲ್ಲ, ಉತ್ತಮಗುಣಮಟ್ಟ, ಪೌಷ್ಟಿಕಾಂಶ ಹೆಚ್ಚು |
| ಮೆಕ್ಕೆ ಜೋಳ | 23 | ಬರವನ್ನುತಾಳಿಕೊಳ್ಳಬಲ್ಲುದು, ಅಡ್ಡಬೀಳುವುದಿಲ್ಲ/ಬಾಗುವುದಿಲ್ಲ, ಸಿಹಿ ರುಚಿ, ಜಂಗು/ ತುಕ್ಕು ಹಿಡಿಯುವುದಿಲ್ಲ, ಉತ್ತಮಗುಣಮಟ್ಟದ ಮೇವು |
| ಜೋಳ | 21 | ಎಲ್ಲ ದೇಸಿ ತಳಿಗಳು ಕಾಡಿಗೆರೋಗ ನಿರೋಧಕ ಶಕ್ತಿ ಹೊಂದಿದೆ, ಸಿಹಿ ರುಚಿ, ಬರವನ್ನು ತಾಳಿಕೊಳ್ಳುತ್ತದೆ,ಸುಲಭವಾಗಿ ತೆನೆ ಬಡಿಯಬಹುದು/ಕಾಳನ್ನು ಬಿಡಿಸಬಹುದು, ಮೇವು ಸಿಹಿಯಾಗಿರುತ್ತದೆ |
| ಅಲಸಂದೆ | 6 | ಹೆಚ್ಚು ಸಿಹಿ, ಬರವನ್ನು ತಾಳಿಕೊಂಡು ಉಳಿಯಬಲ್ಲುದು, ಕೀಟಬಾಧೆಕಡಿಮೆ |
| ಚಪ್ಪರದವರೆ ಕಾಯಿ | 12 | ಉದ್ದವಾದ ಕಾಯಿ/ಉದ್ದ ಬೀಜಕೋಶ, ದಪ್ಪ ಕಾಳು, ಸಿಹಿ ರುಚಿ, ಕೀಟಬಾಧೆಕಡಿಮೆ |
| ತಿನ್ನಬಹುದಾದ ಕಾಡು | 63 | ಹೆಚ್ಚಿನ ಔಷಧೀಯ ಗುಣಗಳನ್ನು ಹೊಂದಿದೆ. ಕೆಲವು ವರ್ಷವಿಡಿ ಬೆಳೆಯುತ್ತವೆ, ಸುಲಭವಾಗಿ ಬೆಳೆಯಬಹುದು, ರೋಗನಿರೋಧಕಗುಣ, ಬರ ತಾಳಿಕೊಳ್ಳುವ ಗುಣ ಹೊಂದಿದೆ |
| **ಒಟ್ಟು** | **135** | |

ಸಂಗ್ರಹಿಸಲಾಯಿತು. ನಂತರ ಇನ್ನಿತರ ಬೆಳೆಗಳ ವಿವಿಧ ತಳಿಗಳನ್ನು ಕೂಡ ಸಂಗ್ರಹಿಸಲಾಯಿತು. ಒಟ್ಟು 258 ಬಗೆಯ ದೇಸಿ ತಳಿಗಳನ್ನು ಸಂಗ್ರಹಿಸಲಾಯಿತು. ಇಲ್ಲಿ ನೀಡಲಾಗಿರುವ ಕೋಷ್ಟಕದಲ್ಲಿ ಹಾಗೆ ಸಂಗ್ರಹಿಸಲಾದ ಸಾಂಪ್ರದಾಯಿಕ ದೇಸಿ ತಳಿಗಳು ಹಾಗೂ ಅವುಗಳ ಗುಣಗಳನ್ನು ಪಟ್ಟಿ ಮಾಡಲಾಗಿದೆ.

## ಇನ್–ಸಿತು ಸಂರಕ್ಷಣೆ

ನಿರ್ದಿಷ್ಟ ಸ್ಥಳೀಯ ತಳಿಗಳ ಕುರಿತು ಪ್ರದರ್ಶನದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಇನ್–ಸಿತು ಸಂರಕ್ಷಣಾ ವಿಧಾನದಲ್ಲಿ ಬಳಸಿ ದೃಢೀಕರಿಸಿಕೊಳ್ಳಲಾಯಿತು. ಪ್ರತಿ ದೇಸಿ ತಳಿಯ ಕುರಿತು ಸಮುದಾಯಗಳೊಂದಿಗೆ ಚರ್ಚಿಸಿದ ಬಳಿಕ ಮೆಕ್ಕೆಜೋಳ ಮತ್ತು ಜೋಳ ಎರಡರಲ್ಲೂ ತಲಾ 5 ಬಗೆಗಳನ್ನು 'ಇನ್–ಸಿತು' ಸಂರಕ್ಷಣೆಗೆ ಆಯ್ಕೆ ಮಾಡಿಕೊಳ್ಳಲಾಯಿತು (ಕೋಷ್ಟಕ –2). ಇನ್–ಸಿತು ಸಂರಕ್ಷಣಾ ವಿಧಾನದಲ್ಲಿ ತಳಿಗಳನ್ನು ಬೆಳೆಸಿ, ಸಂರಕ್ಷಿಸಲು ಹತ್ತು ಕ್ಷೇತ್ರಗಳನ್ನು ಗುರುತಿಸಲಾಯಿತಲ್ಲದೇ, ಈ ಪ್ರಯೋಗಕ್ಕೆ ರೈತರ ಭೂಮಿಯನ್ನೇ ಬಳಸಲಾಯಿತು..

ಸಂರಕ್ಷಣಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಸಮುದಾಯಗಳೇ ಆ ತಳಿಗಳು ಹೇಗೆ ಫಲ ಕೊಡುತ್ತವೆ ಎನ್ನುವುದನ್ನು ಗಮನಿಸಿ ವೈವಿಧ್ಯಮಯ ತಳಿಗಳ ಆಯ್ಕೆಮಾಡಿದರು. ಬೀಜ ಸಂರಕ್ಷಣಾ ಸಮಿತಿಯ ಸದಸ್ಯರು, ತಳಿಗಳ ಕುರಿತು ಮಾಹಿತಿಯಿದ್ದ ರೈತರು BAIF ಸಿಬ್ಬಂದಿಯೊಂದಿಗೆ ಇನ್‌ಸಿತು ವಿಧಾನದಲ್ಲಿ ತಳಿಗಳನ್ನು ಬೆಳೆಸುತ್ತಿದ್ದ ಕ್ಷೇತ್ರಗಳಿಗೆ, ಕಾಲಕಾಲಕ್ಕೆ ಹಾಗೂ ಕೊಯ್ಲಿಗೆ ಮುನ್ನ ನಿಯಮಿತವಾಗಿ ಭೇಟಿ ನೀಡುತ್ತಿದ್ದರು. ವೈಜ್ಞಾನಿಕ ವಿಧಾನಗಳನ್ನು ಅನುಸರಿಸಿ ಪರಿಶುದ್ಧ ತಳಿಗಳನ್ನು ಆಯ್ಕೆಮಾಡುವ ಕುರಿತು ಸದಸ್ಯರಿಗೆ ತರಬೇತಿ ನೀಡಲಾಗಿತ್ತು. ಕಾಳಿನ ಗಾತ್ರ, ಬಣ್ಣ, ಗಿಡದಎತ್ತರ, ಗಿಡಗಳ ಅಡ್ಡಬೀಳುವಿಕೆ/ಬಾಗುವಿಕೆ (ಲಾಡ್ಜಿಂಗ್), ಕೀಟನಿಯಂತ್ರಣ ಮತ್ತು ರೋಗ ನಿರೋಧಕ ಶಕ್ತಿ, ಬರ ನಿಯಂತ್ರಣ ಸಾಮರ್ಥ್ಯ, ಹೂಗೊಂಚಲಿನ ರಚನಾಸ್ವರೂಪ ಇತ್ಯಾದಿ ಗುಣಗಳನ್ನು ಆಧರಿಸಿ ಸದಸ್ಯರು ತಳಿಗಳನ್ನು ಆಯ್ಕೆಮಾಡಿದರು. ICAR(Indian Council of Agricultural Research)ನ DUS(Distinctiveness, Uniformity and Stability)ನಲ್ಲಿ



*ಜಾಗೃತಿ ಕಾರ್ಯಕ್ರಮ ಪ್ರಗತಿಯಲ್ಲಿದೆ*

ಹೇಳಲಾಗಿರುವ ಮಾರ್ಗದರ್ಶಕ ಸೂತ್ರಗಳಿಗನುಸಾರವಾಗಿ ಮಾಹಿತಿ ಸಂಗ್ರಹಿಸಿದ ಸದಸ್ಯರು 21 ಬಗೆಯ ಮೆಕ್ಕೆಜೋಳ ಮತ್ತು 18 ಬಗೆಯ ಜೋಳದ ತಳಿಗಳ ವೈಜ್ಞಾನಿಕ ಗುಣಲಕ್ಷಣಗಳನ್ನು ಗುರುತಿಸಿದ್ದಾರೆ.

## ಬೀಜ ಸಂರಕ್ಷಣಾ ಸಮಿತಿ

ಬೇರೆಬೇರೆ ಹಳ್ಳಿಗಳಿಂದ ಆಯ್ಕೆಯಾದ ಸದಸ್ಯರು ಈ ಸಮಿತಿಯಲ್ಲಿದ್ದಾರೆ. ಈ ಚಟುವಟಿಕೆಯಲ್ಲಿ ಇವರೆಲ್ಲ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು ಪ್ರತಿ ಯೋಜನೆಯನ್ನು ಹೊಲಗಳಲ್ಲಿ ಕಾರ್ಯಗತಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಸಮಿತಿಯು ಪ್ರತಿ ತಿಂಗಳು ಹೊಲದಲ್ಲಿಯೇ ಸಭೆ ನಡೆಸುತ್ತದೆ. ಇನ್–ಸಿತು ವಿಧಾನವನ್ನು ಅಳವಡಿಸಿರುವ ಕ್ಷೇತ್ರಗಳಿಗೆ ಭೇಟಿ ನೀಡುವುದರೊಂದಿಗೆ ಕಾರ್ಯಯೋಜನೆಯನ್ನು ಚರ್ಚಿಸಲಾಗುತ್ತದೆ. ಬೀಜಗಳನ್ನು ಸಂಗ್ರಹಿಸಿ, ಅವುಗಳನ್ನು ಇತರ ರೈತರೊಂದಿಗೆ ವಿನಿಮಯ ಮಾಡಿಕೊಳ್ಳುವುದು ಸಮಿತಿಯ ಹೊಣೆ. ಬ್ಲಾಕ್‌ಮಟ್ಟದ ಬೀಜ ಸಂರಕ್ಷಣಾ ಸಮಿತಿಯ ಹೆಸರು 'ಯಾಹಮೊಗಿ ಮಾತಾ ಸೀಡ್ ಸೇವರ್‌ಕಮಿಟಿ'. ಪ್ರತಿ ಗುಂಪು ಬ್ಲಾಕ್‌ಮಟ್ಟದ ಸಮಿತಿಗೆ ತನ್ನ ಪ್ರತಿನಿಧಿಯನ್ನು ಆಯ್ಕೆ ಮಾಡುತ್ತದೆ. ಬ್ಲಾಕ್‌ಮಟ್ಟದ ಸಮಿತಿಯಲ್ಲಿ ಒಟ್ಟು ಹತ್ತುಮಂದಿ ಸದಸ್ಯರಿರುತ್ತಾರೆ. ವಿವಿಧ

*ದೇಸಿ ತಳಿಗಳ ಸಂರಕ್ಷಣೆ, ಆ ತಳಿಗಳನ್ನು ಬೆಳೆಸುವಲ್ಲಿ ಸಕ್ರಿಯವಾಗಿ ಭಾಗವಹಿಸುವಿಕೆ*



**ಕೋಷ್ಟಕ 2: ಸ್ಥಳೀಯವಾಗಿ ಸಂಗ್ರಹಿಸಿದ ದೇಸಿ ಜೋಳ ಮತ್ತು ಮೆಕ್ಕೆಜೋಳದ ತಳಿಗಳನ್ನು ದ್ವಿಗುಣಗೊಳಿಸುವಿಕೆ**

| ಬೆಳೆ | ಸ್ಥಳೀಯ ಹೆಸರು | ಮುಖ್ಯವಾದ ಗುಣಲಕ್ಷಣಗಳು/ವಿಶೇಷತೆಗಳು |
|---|---|---|
| ಮೆಕ್ಕೆ ಜೋಳ | ಕುಕ್ಕುಡ್ ಮುಕೈ (Kukkudmukai) | 90–95 ದಿನಗಳಲ್ಲಿ ಫಸಲು ಕೈಗೆ ಬರುತ್ತದೆ, ಬರವನ್ನು ತಾಳಿಕೊಳ್ಳುತ್ತದೆ, ತುಕ್ಕುರೋಗ ನಿರೋಧಕ ಶಕ್ತಿ ಹೊಂದಿದೆ. ಇದು ಸಿಹಿಯಾಗಿರುವುದರಿಂದ ವಿಶೇಷವಾಗಿ ಇದನ್ನು ಲಾಡು ಮಾಡಲು ಬಳಸುತ್ತಾರೆ. |
| ಮೆಕ್ಕೆ ಜೋಳ | ಕೆಹರಿ ಮುಕೈ (ಕೆಂಪುಬಣ್ಣದ ಮೆಕ್ಕೆ ಜೋಳ) (Keharimukai (red colour maize) | 95 – 100 ದಿನಗಳಲ್ಲಿ ಫಸಲು ಕೈಗೆ ಬರುತ್ತದೆ. ರಸಹೀರುವ ಕೀಟಗಳ ವಿರುದ್ಧ ತಾಳಿಕೆಯ ಶಕ್ತಿ ಹೊಂದಿದೆ, ಅಡ್ಡಬೀಳುವುದಿಲ್ಲ/ಬಾಗುವುದಿಲ್ಲ (ನಾನ್ ಲಾಡ್ಜಿಂಗ್), ಬರವನ್ನು ತಾಳಿಕೊಳ್ಳಬಲ್ಲುದು. |
| ಮೆಕ್ಕೆ ಜೋಳ | ಪಿವಲ ಲಾಲ್ ಮಕೈ ಮತ್ತು ಪಿವಾಡ ಲಹನ್ ಮಕ್ಕಿ (Pivalalal makai, and pivadalahanmakki) | ಜೋಳದ ದಿಂಡುಗಳು ಉದ್ದವಾಗಿರುತ್ತವೆ, ಹೊಳೆಯುವ ಹಳದಿ ಬಣ್ಣದ ಬೀಜಗಳು, ಗಿಡದಎತ್ತರ 215 ಸೆಂಮಿ, ಬರವನ್ನು ತಾಳಿಕೊಳ್ಳಬಲ್ಲುದು. |
| ಮೆಕ್ಕೆ ಜೋಳ | ಪಿವಾಲ ಮಕ (Pivalamaka ) | ಉದ್ದವಾದ ದಿಂಡುಗಳು ಸಿಪ್ಪೆ/ಹೊಟ್ಟುಕಡಿಮೆ, ತುಕ್ಕುರೋಗ ನಿರೋಧಕ ಶಕ್ತಿ ಹೊಂದಿದೆ. ವಿಶೇಷವಾಗಿ ಭಕ್ರಿ ಮತ್ತು ಲಾಹ್ಯ ಮಾಡಲು ಬಳಸುತ್ತಾರೆ. |
| ಜೋಳ | ಚಿಕನಿ ಲಾಲ್‌ಜುವಾರ್ (ಸೈಲ್ ಕಾನಿಸ್) ಮತ್ತುಚಿಕನಿ ಜುವಾರ್ (ಘಾಟ್ಟ್ ಕಾನಿಸ್) (Chikanilaljuwar (sail kanis) and chikanijuwar (Ghattkanis) | ಕಾಡಿಗೆರೋಗ ನಿರೋಧಕ ಶಕ್ತಿ ಹೊಂದಿದೆ. ಬರವನ್ನು ತಾಳಿಕೊಳ್ಳಬಲ್ಲುದು. ವಿಶೇಷವಾಗಿ ಹಪ್ಪಳ ತಯಾರಿಸಲು ಬಳಸುತ್ತಾರೆ. |
| ಜೋಳ | ಲಹನ್ ಮಣಿಜುವಾರ್ ಮತ್ತು ಮೋತಿ ಮಣಿಜುವಾರ್ (Lahan Mani Juwar and mothimanijuwar) | 105 – 110 ದಿನಗಳಿಗೆ ಫಸಲು ನೀಡುತ್ತದೆ. ಕಾಡಿಗೆರೋಗ ನಿರೋಧಕ ಶಕ್ತಿ ಹೊಂದಿದೆ. ಅಡ್ಡಲಾಗುವುದಿಲ್ಲ/ ಬಾಗುವುದಿಲ್ಲ (non-lodging), ಸುಲಭವಾಗಿ ಪುಡಿಮಾಡಬಹುದು, ಒಳ್ಳೆಯ ಗುಣಮಟ್ಟದ ಮೇವು. |
| ಜೋಳ | ಮೋತಿ ಸಫೇದ್‌ಜುವಾರ್ (Mothisafedjuwar) | ಉದ್ದವಾದ ಗಿಡಗಳ ಎತ್ತರ 220–240 ಸೆಂ.ಮೀ., ಕೊಯ್ಲಿನ ಸಮಯದಲ್ಲಿ ಗಿಡಗಳು ಹಸಿರಾಗುತ್ತವೆ. ಹಾಗೂ ಕಾಳು ಹಾಗೂ ಮೇವಿಗೆ ಉತ್ತಮವಾದದ್ದು. ರಸಭರಿತ, ಸಿಹಿ ರುಚಿ, ಕಾಳಿನ ಗಾತ್ರದೊಡ್ಡದಾಗಿರುತ್ತದೆ. ವಿಶೇಷವಾಗಿ ಭಕ್ರಿ ಮತ್ತು ಲಾಹ್ಯ ಮಾಡಲು ಬಳಸುವರು. |

ತರಕಾರಿ ಬೆಳೆಗಳ ಬೀಜಗಳನ್ನು ಸಂರಕ್ಷಿಸಿದ ಸುಮಾರು 70 ಮಂದಿ ಮಹಿಳಾ ಕೃಷಿಕರು ಬೀಜಸಂರಕ್ಷಕರಾಗಿದ್ದಾರೆ.

ಗ್ರಾಮೀಣ ಮಟ್ಟದಲ್ಲಿ ಮೂರು ಬೀಜಬ್ಯಾಂಕುಗಳನ್ನು ಸ್ಥಾಪಿಸಲಾಗಿದ್ದು ಇವುಗಳನ್ನು ರೈತರೇ ನೋಡಿಕೊಳ್ಳುತ್ತಿದ್ದಾರೆ. ಆಸಕ್ತ ರೈತರಿಗೆ ಬೀಜ ಸಂರಕ್ಷಣಾ ಸಮಿತಿಯು ವಿನಿಮಯದ ಆಧಾರದ ಮೇಲೆ ಬೀಜಗಳನ್ನು ನೀಡುತ್ತದೆ. ಬೀಜಬ್ಯಾಂಕಿನಿಂದ ಬೀಜಗಳನ್ನು ಪಡೆದ ರೈತ ತಾನು ಪಡೆದದ್ದಕ್ಕಿಂತ ಎರಡು ಪಟ್ಟು ಹೆಚ್ಚಿನ ಬೀಜಗಳನ್ನು ಬ್ಯಾಂಕಿಗೆ ಹಿಂತಿರುಗಿಸಬೇಕು. ಇತ್ತೀಚೆಗೆ ಬೀಜಸಂರಕ್ಷಣಾ ಸಮಿತಿಯು ಹತ್ತು ಅರ್ಜಿಗಳನ್ನು (ಮೆಕ್ಕೆಜೋಳದ ಐದು ಮತ್ತುಜೋಳದ ಐದು ದೇಸೀ ತಳಿಗಳನ್ನು ಸಂರಕ್ಷಿಸಲುಕೋರಿ) ದೆಹಲಿಯಲ್ಲಿರುವ PPV FRA(protection of plant varieties and farmers right acts)ಗೆ ಸಲ್ಲಿಸಿದೆ.

## ಫಲಿತಾಂಶ

ಬೆಳೆಗಳ ವೈವಿಧ್ಯತೆ ಮತ್ತು ಅದಕ್ಕೆ ಸಂಬಂಧಿಸಿದ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳುವ ಕ್ರಮವು ಹಲವು ಸಕಾರಾತ್ಮಕ ಫಲಿತಾಂಶಗಳನ್ನು ನೀಡಿದೆ.

ತಮ್ಮ ಸಮುದಾಯಗಳಲ್ಲೇ ಅಪರಿಮಿತಜ್ಞಾನ/ತಿಳಿವಳಿಕೆ ಇದೆ ಎನ್ನುವುದು ಸಮುದಾಯಗಳಿಗೆ ಕ್ರಮೇಣ ಅರಿವಾಯಿತು. ತಮ್ಮಲ್ಲಿನ ದೇಸಿ ತಳಿಗಳಲ್ಲಿಯೂ ಕೂಡಾ ರುಚಿ, ಸ್ವಾದ, ಹೆಚ್ಚು ದಿನ ಹಾಳಾಗದೆ ಉಳಿಯಬಲ್ಲ ಸಾಮರ್ಥ್ಯ, ಹೆಚ್ಚು ಪೋಷಕಾಂಶ ಇತ್ಯಾದಿ ಉತ್ತಮ ಗುಣಗಳು ಇರುವುದನ್ನು ಇಲ್ಲಿನ ರೈತರು ಕಂಡುಕೊಂಡರು. ಅದೇ ರೀತಿ ಈ ತಳಿಗಳು ಬರವನ್ನು ತಾಳಿಕೊಳ್ಳುವ, ಕೀಟರೋಗಬಾಧೆಗಳಿಗೆ ಸುಲಭವಾಗಿ ತುತ್ತಾಗದ ಗುಣಗಳನ್ನು ಹೊಂದಿರುವುದನ್ನು ಗುರುತಿಸಿದರು. ಬೀಜಗಳ ಜೀವದ್ರವ್ಯ ಹೆಚ್ಚಿದ್ದು, ಅವುಗಳನ್ನು ಬೆಳೆಯಲು ತಗಲುವ ವೆಚ್ಚ ಕಡಿಮೆ ಎಂಬುದು ಅರಿವಾದ ಮೇಲೆ ರೈತರು ಇವುಗಳನ್ನು ಹೆಚ್ಚಾಗಿ ಬೆಳೆಯಲು ಶುರುಮಾಡಿದರು. 2016–17ರಲ್ಲಿ 120 ಬೀಜ ಸಂರಕ್ಷಕ ರೈತರು 120 ಎಕರೆಯಲ್ಲಿ ಮೆಕ್ಕೆಜೋಳ ಮತ್ತು ಜೋಳದ ದೇಸಿ ತಳಿಗಳನ್ನು ಬೆಳೆದರು. ಇದಕ್ಕೂ ಮುಂಚೆ ಅವರು 1/8 ಎಕರೆಯಲ್ಲಿ ಮಾತ್ರ ಇವುಗಳನ್ನು ಬೆಳೆಯುತ್ತಿದ್ದರು. ಈಗ ಈ ತಳಿಗಳನ್ನು ಬೆಳೆಯಲು ಹೆಚ್ಚು ಮಂದಿ ರೈತರು ಆಸಕ್ತಿ ತೋರುತ್ತಿದ್ದಾರೆ.

ಬೀಜ ಉತ್ಪಾದನೆಯ ಮೇಲೆ ಹಿಡಿತ ಸಾಧಿಸಿರುವುದರಿಂದ ರೈತರಿಗೆ ಈಗ ಬೀಜಗಳು ಸುಲಭವಾಗಿ ಸಿಕ್ಕುತ್ತಿವೆ. ಹಾಗಾಗಿ ಹೊರಗಿನ ಮೂಲಗಳ ಮೇಲಿನ ಅವಲಂಬನೆ ಕಡಿಮೆಯಾಗಿದೆ. ಮುಂದಿನ ಖಾರಿಫ್ ಋತುವಿನಲ್ಲಿ ಸುಮಾರು 550 ಕೆಜಿ ಮೆಕ್ಕೆಜೋಳ ಮತ್ತು 500 ಕೆಜಿ ಜೋಳದ ಬೀಜಗಳು ಬಿತ್ತನೆಗೆ ಸಿಗಲಿವೆ. ಇದರೊಂದಿಗೆ ಬೀಜಗಳ ಬೆಲೆ ಕೂಡಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿದೆ.

ದೇಸಿ ತಳಿಗಳ ಸಂರಕ್ಷಣೆ, ಅವುಗಳ ಮಾದರಿಗಳನ್ನು ಬೆಳೆಸುವುದು ಹಾಗೂ ಇವುಗಳ ಪುನಶ್ಚೇತನ ಚಟುವಟಿಕೆಗಳಲ್ಲಿ ಬುಡಕಟ್ಟು ರೈತರು ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಇದರಿಂದಾಗಿ ಅವರಿಗೆ ತಮ್ಮ ಆಹಾರ ದಾಸ್ತಾನಿನ ಮೇಲೆ ಹಿಡಿತ ಕಾಪಾಡಿಕೊಳ್ಳಲು ಸಹಾಯವಾಗುತ್ತಿದೆ. ಸ್ಥಳೀಯ ಬೀಜಗಳ ಬಗ್ಗೆ ತಿಳಿವಳಿಕೆ ದಕ್ಕಿರುವುದರಿಂದ ತಮ್ಮ ಆಯ್ಕೆಯ ಬೀಜಗಳನ್ನು ಸುಲಭವಾಗಿ ಪಡೆಯುವುದು ಈಗ ಅವರಿಗೆ ಸಾಧ್ಯವಾಗುತ್ತಿದೆ. ■

**Sudhir M Wagle**
BAIF MITTRA Bhavan, Opp Niwas Homes,
Behind Bodhale Nagar, Nashik-Pune road,
Nashik -11
E-mail: mittransk@gmail.com

**ಆಂಗ್ಲ ಮೂಲ**
ಲೀಸಾ ಇಂಡಿಯಾ, ಸಂಪುಟ 19, ಸಂಚಿಕೆ 1, ಮಾರ್ಚ್ 2017

# ಕೃಷಿಯ ಹೊಸರೂಪ

## *ಹವಾಮಾನ ವೈಪರಿತ್ಯಗಳಿಗೊಂದು ಪ್ರತಿಕ್ರಿಯೆ*

■ **ಸುರೇಶ್‌ಕಣ್ಣ ಕೆ.**

**ಬದಲಾಗುತ್ತಿರುವ ಹವಾಮಾನ ಪರಿಸ್ಥಿತಿಗಳಲ್ಲಿ ಹೊಸದಾರಿಗಳನ್ನು ಹುಡುಕುತ್ತಿರುವ ರೈತರು ಕೃಷಿ ವ್ಯವಸ್ಥೆಯನ್ನು ಬದಲಾಯಿಸಿ, ಹೊಸದಿಕ್ಕಿನತ್ತ ತಿರುಗಿ, ಕೃಷಿಗೆ ಚೇತರಿಕೆಯನ್ನು ಒದಗಿಸುವ ಮೂಲಕ ಆಹಾರ ಭದ್ರತೆಯನ್ನು ಕಂಡುಕೊಳ್ಳುವ ಪ್ರಕ್ರಿಯೆಯಲ್ಲಿದ್ದಾರೆ. ಇಂತಹ ತಳಮಟ್ಟದ ಅನ್ವೇಷಣೆಗಳನ್ನು ಗುರುತಿಸಿ ಸೂಕ್ತ ಸಾಂಸ್ಥಿಕ ಮತ್ತು ನೈತಿಕ ಬೆಂಬಲವನ್ನು ನೀಡಬೇಕು.**

ತಮಿಳುನಾಡಿನ ಕುಂಭಕೋಣಂನ ತೇನಂಪಡುಗೈ ಹಳ್ಳಿಯ ಭಾಸ್ಕರನ್ ಸಾವಯವ ಕೃಷಿಕರಲ್ಲಿ ಪ್ರಮುಖರು. ತಮಿಳುನಾಡಿನ ಸಾವಯವ ಕೃಷಿ ಪದ್ಧತಿಯ ಹರಿಕಾರರಾದ ಡಾ.ನಮ್ಮಲ್ವರ್ ಅವರಿಂದ ಪ್ರಭಾವಿತರಾಗಿ ಕಳೆದ 15 ವರ್ಷಗಳಿಂದ ಭಾಸ್ಕರನ್ ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. 2006ರಲ್ಲಿ ಆದಿರಂಗಂನಲ್ಲಿ ನೆಲ್‌ತಿರುವಿಜಾ (ಭತ್ತದ ಉತ್ಸವ) ಆರಂಭವಾದಾಗಿನಿಂದ ಅದರಲ್ಲಿ ಭಾಗವಹಿಸುತ್ತಿದ್ದಾರೆ. ಸಾವಯವ ಕೃಷಿ ಮಾಡುವುದು ಮತ್ತು ಸಾಂಪ್ರದಾಯಿಕ ಭತ್ತದ ವಿವಿಧ ತಳಿಗಳನ್ನು ಬೆಳೆಯುವುದರೊಂದಿಗೆ ತಮ್ಮ ಜಮೀನಿನಲ್ಲಿ ಸಂಶೋಧನೆಯನ್ನು ಸಹ ನಡೆಸುತ್ತಿದ್ದಾರೆ. ಆ ಮೂಲಕ ನಿರಂತರವಾಗಿ ಕೃಷಿಯಲ್ಲಿ, ಹವಾಮಾನದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗಮನಿಸುತ್ತಾ ಅವುಗಳನ್ನು ವಿಶ್ಲೇಷಣೆಗೆ ಒಳಪಡಿಸಿ, ಅಭ್ಯಸಿಸುವುದು ಅವರ ಕ್ರಮ. ಇವರು ತಮ್ಮ ಜಮೀನಿನಲ್ಲಿ ನಡೆಸಿರುವ ಸಂಶೋಧನೆಗಳಿಂದಾಗಿ ಇತರ ರೈತರಿಗೆ ಹವಾಮಾನ ವೈಪರಿತ್ಯಗಳನ್ನು ಹೇಗೆ ಎದುರಿಸಬೇಕೆನ್ನುವುದಕ್ಕೆ ಪ್ರತ್ಯಕ್ಷ ಪರಿಹಾರಗಳು ದಕ್ಕಿವೆ. ಈ ಪರಿಹಾರಗಳನ್ನು ತೀರಪ್ರದೇಶಗಳು ಹಾಗೂ ತಮಿಳುನಾಡಿನ ಇತರ ಪ್ರದೇಶಗಳಲ್ಲಿಯೂ ಅಳವಡಿಸಿಕೊಳ್ಳಬಹುದಾಗಿದೆ.

### ಅನಿರೀಕ್ಷಿತ ಹವಾಮಾನ ವೈಪರೀತ್ಯ

20 ವರ್ಷಗಳ ಹಿಂದೆ ಮಳೆ ಚೆನ್ನಾಗಿ ಬೀಳುತ್ತಿತ್ತು. ವರ್ಷದ 10 ತಿಂಗಳು ಕೆರೆ, ಕೊಳಗಳಲ್ಲಿ ನೀರು ಇರುತ್ತಿತ್ತು. ಇದರಿಂದ ವರ್ಷಕ್ಕೆ ಎರಡು ಬೆಳೆ ಬೆಳೆಯಬಹುದಿತ್ತು. ವರ್ಷದಲ್ಲಿ 3 ತಿಂಗಳು ಮಳೆಗಾಲದ ದಿನಗಳು ಇರುತ್ತಿದ್ದವು. ಆದರೆ ಈಗ ನದಿಗಳಲ್ಲಿ ಒಂದು ತಿಂಗಳು ಕೂಡಾ ನೀರು ಇರುವುದಿಲ್ಲ. ನೀರಿನ ಎಲ್ಲಾ ಸಂಪನ್ಮೂಲಗಳು ಬತ್ತಿಹೋಗಿವೆ. ಯಾರ ತೋಟದಲ್ಲಿ ಕೊಳವೆಬಾವಿ ಇದ್ದು ನೀರೆತ್ತಲು ವಿದ್ಯುತ್ ವ್ಯವಸ್ಥೆ ಇದೆಯೋ ಅವರು ಮಾತ್ರ ಕೃಷಿ ಮಾಡಬಹುದಾಗಿದೆ. ಬಹುತೇಕ ಕೃಷಿಭೂಮಿ ಪಾಳುಬಿದ್ದಿದೆ.

ಮಳೆಯನ್ನು ಬಹುಕಾಲದಿಂದ ಗಮನಿಸುತ್ತ, ವಿಶ್ಲೇಷಿಸುತ್ತ ಬಂದಿರುವ ಭಾಸ್ಕರನ್ ಕಂಡುಕೊಂಡ ಹಾಗೆ 1991–95ರವರೆಗೆ ನಿಯಮಿತವಾಗಿ ಮಳೆ ಬೀಳುತ್ತಿತ್ತು. ಆದ್ದರಿಂದ ರೈತರು ಎರಡು ಬೆಳೆ ಬೆಳೆಯಬಹುದಿತ್ತು. 2000ದಲ್ಲಿ ಮಳೆಯ ಪ್ರಮಾಣ ನಿಧಾನವಾಗಿ ಕಡಿಮೆಯಾಗಿ ರೈತರು ಅನಿವಾರ್ಯವಾಗಿ ಒಂದು ಬೆಳೆಯನ್ನು ಮಾತ್ರ ಬೆಳೆಯುವಂತಾಯಿತು. 2000–2004ರವರೆಗೆ ಮಳೆಯ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿ ಬರಗಾಲದ ಪರಿಸ್ಥಿತಿ ಉಂಟಾಯಿತು. ಆದರೆ 2005ರಲ್ಲಿ ಅತಿವೃಷ್ಟಿಯಿಂದಾಗಿ ಪ್ರವಾಹ ಪರಿಸ್ಥಿತಿ ಉಂಟಾಯಿತು. ಅದಾದ ನಂತರ ಮಳೆ ಬೀಳುವ ರೀತಿಯಲ್ಲಿ ಸಾಕಷ್ಟು ಏರುಪೇರುಗಳಾದವು. 2010ರವರೆಗೂ ಇದೇ ರೀತಿಯ ಪರಿಸ್ಥಿತಿ ಅಂದರೆ ಒಮ್ಮೆ ಅತಿವೃಷ್ಟಿ ಇಲ್ಲವೇ ಅನಾವೃಷ್ಟಿ ಕಾಡತೊಡಗಿತು. 2012 ಮತ್ತು 2013 ತೀವ್ರ ಬರಗಾಲವನ್ನು ಎದುರಿಸಿದ ವರ್ಷಗಳು.

ಅವರ ವಿಶ್ಲೇಷಣೆಯ ಪ್ರಕಾರ ಬರಗಾಲವು ಪ್ರತಿ ಐದು ವರ್ಷಕ್ಕೊಮ್ಮೆ ಬರುತ್ತದೆ. ಅದರ ಹಿಂದೆಯೇ ಭಾರಿಮಳೆ ಬೀಳುವ ವರ್ಷವೂ ಬರುತ್ತದೆ. ಇದರೊಂದಿಗೆ ಮತ್ತೆ ತೀವ್ರ ಬರಗಾಲದ ವರ್ಷದೊಂದಿಗೆ 10 ದಿನಕ್ಕೂ ಕಡಿಮೆ ಮಳೆಬೀಳುವ ವರ್ಷವಿರುತ್ತದೆ. ಈ ರೀತಿಯ ಅನಿಶ್ಚಿತ ಮಳೆ

*ಭಾಸ್ಕರನ್ ತಂಡಾಲ್ ತಂಡಕ್ಕೆ ಹವಾಮಾನ ವೈಪರೀತ್ಯ ಪ್ರತಿರೋಧ ವಿಧಾನಗಳನ್ನು ವಿವರಿಸುತ್ತಿರುವುದು*



ಮತ್ತು ಹವಾಮಾನ ವೈಪರೀತ್ಯಗಳಿಂದಾಗಿ ರೈತರು ಯಾವುದೇ ಒಂದು ರೀತಿಯ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆ ವರ್ಷ ಮಳೆ ಹೇಗೆ ಬೀಳುತ್ತದೆ ಎನ್ನುವುದರ ಕುರಿತು ರೈತರಿಗೆ ಖಾತ್ರಿ ಇರುವುದಿಲ್ಲವಾದ್ದರಿಂದ ಅದಕ್ಕೆ ತಕ್ಕ ಹಾಗೆ ಯಾವ ಬೆಳೆಯನ್ನು ಬೆಳೆಯಬೇಕು ಎಂದು ಅವರು ಮುಂಚಿತವಾಗಿ ಯೋಜಿಸಲು ಸಾಧ್ಯವಾಗುತ್ತಿಲ್ಲ. ಹವಾಮಾನ ವರದಿಗಳು ಕೂಡಾ ಸುಳ್ಳಾಗುತ್ತಿವೆ. ಆದ್ದರಿಂದ ರೈತರು ಮಳೆಯ ವೈಪರೀತ್ಯಗಳನ್ನು ಸಹಿಸಿಕೊಳ್ಳುತ್ತ ತಮ್ಮ ಕೃಷಿ ಅನುಭವದ ಹಿನ್ನಲೆಯಲ್ಲಿಯೇ ಅದಕ್ಕೆ ತಕ್ಕಂತೆ ಕೃಷಿ ತಂತ್ರಗಳನ್ನು ಯೋಜಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ.

## ಹವಾಮಾನ ವೈಪರೀತ್ಯ ಪ್ರತಿರೋಧ ವಿಧಾನಗಳು

ಭಾಸ್ಕರನ್ ತಮ್ಮ ಭತ್ತದ ಕೃಷಿಯ ಅನುಭವ ಮತ್ತು ಹವಾಮಾನ ಬದಲಾವಣೆಯನ್ನು ಸೂಕ್ಷ್ಮವಾಗಿ ಗಮನಿಸುತ್ತ ಬಂದಿರುವುದರ ಆಧಾರದ ಮೇಲೆ ತಮ್ಮದೇ ಆದ ಹವಾಮಾನ ವೈಪರೀತ್ಯ ಪ್ರತಿರೋಧ ವಿಧಾನಗಳನ್ನು ಕಂಡುಕೊಂಡಿದ್ದಾರೆ. 2012ರಲ್ಲಿ ರೈತರು ತೀವ್ರ ಬರಗಾಲವನ್ನು ಎದುರಿಸುತ್ತಿರುವಾಗ ಏನು ಮಾಡುವುದೆಂದು ತಿಳಿಯದೆ ಕಂಗಾಲಾಗಿದ್ದರು. ಆಗ ಭಾಸ್ಕರನ್ ವೆಲ್ಲಾಪೂನಿ ಎನ್ನುವವರು 140 ದಿನಗಳ ಭತ್ತದ ತಳಿಯನ್ನು ಬಿತ್ತಲು ನಿರ್ಧರಿಸಿದರು. ಸೆಪ್ಟಂಬರ್‌ನಲ್ಲಿ ಬಿದ್ದ ಮಳೆ ಉಳುಮೆ ಮಾಡಿ ಬೀಜವನ್ನು ಬಿತ್ತುವಷ್ಟು ತೇವಾಂಶ ನೀಡಿತು. ಅಷ್ಟೇ ತೇವಾಂಶದಿಂದ ಬೀಜಗಳು ಮೊಳಕೆಯೊಡೆದವು. ಅಕ್ಟೋಬರ್‌ನಲ್ಲಿ ದೀಪಾವಳಿಯ ನಂತರ ಬಿದ್ದ ಮಳೆಯಿಂದಾಗಿ ಭತ್ತವು ಒಂದು ಮಟ್ಟಕ್ಕೆ ಬೆಳೆಯಿತು. ಭಾಸ್ಕರನ್ ಅವರಿಗೆ ಅಕ್ಟೋಬರ್, ನವೆಂಬರ್, ಡಿಸೆಂಬರ್‌ನಲ್ಲಿ ಹತ್ತು ದಿನಗಳ ಕಾಲ ನದಿಯ ನೀರು ಸಿಕ್ಕಿತು. ಜನವರಿಯ ವೇಳೆಗೆ ಭತ್ತ ಕಟಾವಿಗೆ ಸಿದ್ಧವಾಗಿತ್ತು. ಭಾಸ್ಕರನ್ ಮಣ್ಣಿನಲ್ಲಿ ತೇವಾಂಶವಿರುವಂತೆ ನೋಡಿಕೊಳ್ಳುತ್ತಾ ಆಗಾಗ್ಗೆ ನೀರುಕೊಡುವುದನ್ನು ನಿಲ್ಲಿಸಿ ಮಣ್ಣನ್ನು ಒಣಗಿಸುವ ತತ್ವ ಚೆನ್ನಾಗಿ ಫಲ ನೀಡುವುದನ್ನು ಕಂಡುಕೊಂಡರು. ಹೀಗಾಗಿ 140 ದಿನಗಳ ಬೆಳೆಯು ಚೆನ್ನಾಗಿ ಬೆಳೆಯಿತು. ಇದಕ್ಕೆ ಅವರು ಅನುಸರಿಸಿದ ಕ್ರಮ ಹೀಗಿತ್ತು: 10 ದಿನಗಳ ಕಾಲ ನೀರುಣಿಸಿ ಮತ್ತೆ 20 ದಿನಗಳ ಕಾಲ ನೀರು ನೀಡುವುದನ್ನು ನಿಲ್ಲಿಸಿ ಮಣ್ಣನ್ನು ಒಣಗಿಸುವುದು. ಈ ವಿಧಾನವು ಬೆಳೆ ಚೆನ್ನಾಗಿ ಬೆಳೆಯಲು ಸಹಕಾರಿಯಾಯಿತು. ಜನವರಿಯ ವೇಳೆಗೆ ಒಳ್ಳೆಯ ಫಸಲು ಸಿಕ್ಕಿತು. ನೇರವಾಗಿ ಬಿತ್ತುವ ವಿಧಾನವನ್ನು ಅನುಸರಿಸಿದ್ದರೂ ಕೂಡಾ ತೆನೆಗಳು ಗಟ್ಟಿಯಾಗಿದ್ದು ಜೊಳ್ಳುಕಾಳುಗಳು ಕಡಿಮೆಯಿದ್ದವು. ಇದರಿಂದ ಭತ್ತವನ್ನು ಕಡಿಮೆ ನೀರಿನಲ್ಲಿ ಕೂಡ ಬೆಳೆಯಬಹುದೆಂಬುದು ಸಾಬೀತಾಯಿತು.

2016ರಲ್ಲಿ ಭತ್ತದ ಕೃಷಿಗೆ ವಾತಾವರಣವು ಅನುಕೂಲಕರವಾಗಿರದ ಸಂದರ್ಭದಲ್ಲಿಯೂ ಭಾಸ್ಕರನ್ ಎರಡು ಸಾಂಪ್ರದಾಯಿಕ ಭತ್ತದ ತಳಿಗಳಾದ ಕರುಂ ಕೂರ್ವೈ (Karunkurvai) ಮತ್ತು ಸೋನಾಮಸೂರಿ (Sonamasuri) ಗಳೊಂದಿಗೆ ಪ್ರಯೋಗ ನಡೆಸಿದರು. ಜೂನ್ ತಿಂಗಳಲ್ಲಿ ಮಳೆ ಬೀಳಬಹುದು ಎನ್ನುವ ನಿರೀಕ್ಷೆಯಲ್ಲಿ ನೇರವಾಗಿ ಬಿತ್ತುವ ವಿಧಾನವನ್ನು ಅನುಸರಿಸಿ ಈ ತಳಿಗಳನ್ನು ಬಿತ್ತಲಾಯಿತು. ಆದರೆ ಮಳೆ ಬೀಳಲಿಲ್ಲ. ಸೋನಾ ಮಸೂರಿಯು(Sonamasuri) ಆರಂಭದಲ್ಲಿ ಚಿಗುರಿದರೂ ಮಳೆಬೀಳದ ಕಾರಣ ಒಣಗಿತು. ಆದರೆ ಕರುಂಕೂರ್ವೈ (Karunkurvai) ಚೆನ್ನಾಗಿ ಚಿಗುರಿದ್ದಲ್ಲದೆ ಉತ್ತಮವಾಗಿಯೂ ಬೆಳೆಯಿತು. ಕೂರ್ವೈ ಮಿತ ನೀರಾವರಿ ಸಂಪನ್ಮೂಲಗಳೊಂದಿಗೆ ಬೆಳೆಯಲು ಸೂಕ್ತ ತಳಿ ಎನ್ನುವುದು ಸಾಬೀತಾಯಿತು.

ಎರಡನೆಯ ಋತುವಿನಲ್ಲಿ ಅಂದರೆ ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ನದಿಯಲ್ಲಿ ಸ್ವಲ್ಪ ಮಟ್ಟಿಗಿನ ನೀರಿರುತ್ತದೆ. ಮಳೆಯ ನಿರೀಕ್ಷೆಯಲ್ಲಿ ಕೆಲವು ರೈತರು ಭತ್ತವನ್ನು ನಾಟಿ ವಿಧಾನ ಹಾಗೂ ನೇರವಾಗಿ ಬಿತ್ತನೆ ಮಾಡುವ ಮೂಲಕ ಕೃಷಿ ಮಾಡಿದರು. ಆದರೆ ಡಿಸಂಬರ್ ಮಧ್ಯದವರೆಗೂ ಮಳೆ ಬಾರದ ಕಾರಣ ಭತ್ತ ಬದುಕಲಿಲ್ಲ. ಕೆಲವು ರೈತರು ಆಳವಾದ ಬೋರ್‌ವೆಲ್‌ಗಳ ನೆರವಿನಿಂದ ಸ್ವಲ್ಪ ಮಟ್ಟಿಗೆ ಬೇಸಾಯ ಮಾಡಲು ಸಾಧ್ಯವಾಯಿತು. ಉಳಿದ ರೈತರು ಭಾರಿ ನಷ್ಟ ಅನುಭವಿಸಿದರು ಮಾತ್ರವಲ್ಲ ವರ್ಷದ ಆದಾಯವನ್ನು ಕೂಡಾ ಕಳೆದುಕೊಂಡರು.

ಈ ಕಾರಣದಿಂದ ಕಡಿಮೆ ನೀರಿನಲ್ಲಿ ತೇವಾಂಶವನ್ನೇ ಆಧರಿಸಿ ಡಿಸೆಂಬರ್ ಮತ್ತು ಜನವರಿಯಲ್ಲಿ ಬೆಳೆಯಬಲ್ಲ ಧಾನ್ಯಗಳನ್ನೇ ನಾಟಿಮಾಡಲು ಭಾಸ್ಕರನ್ ನಿರ್ಧರಿಸಿದರು. ಅವರು ಆಯ್ಕೆ ಮಾಡಿಕೊಂಡ ಬೆಳೆಗಳು ಉದ್ದು (ಎಡಿಟಿ –3), ಹೆಸರು ಕಾಳು (ದೇಸಿ ತಳಿ) ಮತ್ತು ಎಳ್ಳು (ಟಿಎಂವಿ –3). ಡಿಸೆಂಬರ್ 27–28 ಮತ್ತು ಜನವರಿ 20–21ರಂದು ಬೀಜಗಳನ್ನು ಜಮೀನಿನಲ್ಲಿ ಕೈಚೆಲ್ಲುವ ವಿಧಾನದಲ್ಲಿ ಊರಲಾಯಿತು. ಬೆಳೆಗಳು ನೀರಾವರಿಯ ಸೌಲಭ್ಯವಿಲ್ಲದೆಯೂ ಸ್ವಲ್ಪಮಟ್ಟಿಗಿನ ಗೊಬ್ಬರ ಮತ್ತು ಕೀಟನಾಶಕಗಳ ಸಹಾಯದಿಂದ ಚೆನ್ನಾಗಿ ಬೆಳೆದವು. ಈ ಬೆಳೆಗಳನ್ನು ಮಾರ್ಚ್ 25, 2017ರಂದು ಕಟಾವು ಮಾಡಲಾಯಿತು. ಎರಡು ಎಕರೆಯಲ್ಲಿ 250ಕೆಜಿ ಎಳ್ಳು, ಎರಡೂವರೆ ಎಕರೆಯಲ್ಲಿ 1100ಕೆಜಿ ಉದ್ದು ಮತ್ತು ಒಂದು ಎಕರೆಯಲ್ಲಿ 350ಕೆಜಿ ಹೆಸರು ಕಾಳಿನ ಇಳುವರಿಯನ್ನು ಅವರು ಪಡೆದರು.

ಬದಲಾಗುತ್ತಿದ್ದ ಹವಾಮಾನ ಪರಿಸ್ಥಿತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದ ಉಳಿದ ರೈತರು ಹೈಬ್ರೀಡ್ ಭತ್ತವನ್ನು ಬೆಳೆದು ನಷ್ಟ ಅನುಭವಿಸಿದರು. ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಭಾಸ್ಕರನ್ ವಿವಿಧ ಬೆಳೆಗಳನ್ನು ಬೆಳೆದು ಹವಾಮಾನದ ಬದಲಾವಣೆಗಳನ್ನು ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ಬಳಸಿಕೊಂಡರು.

## ಕಲಿಯಬೇಕಾದ ಪಾಠಗಳು

ಪ್ರತಿಯೊಂದು ಹವಾಮಾನ ಪರಿಸ್ಥಿತಿಯಲ್ಲಿಯೂ ಬೆಳೆಯಬಹುದಾದ ನಿರ್ದಿಷ್ಟ ಸಾಂಪ್ರದಾಯಿಕ ತಳಿಗಳಿದ್ದು, ಅವು ಆಯಾ ಸ್ಥಳೀಯ ವಾತಾವರಣದ ಆಧಾರದ ಮೇಲೆ ಚೆನ್ನಾಗಿ ಬೆಳೆಯುತ್ತವೆ. ಜೊತೆಗೆ ರೈತರಿಗೆ ಹವಾಮಾನ ವೈಪರಿತ್ಯದಂತಹ ಒತ್ತಡದ ಸನ್ನಿವೇಶಗಳನ್ನು ಎದುರಿಸಲು ನೆರವಾಗುತ್ತವೆ. ಋತುಮಾನಕ್ಕೆ ಹೊಂದುವ ತಳಿಗಳ ಕುರಿತು ರೈತರಿಗೆ ಸೂಕ್ತ ಮಾಹಿತಿ ಹಾಗೂ ಅರಿವಿದ್ದರೆ ಅದಕ್ಕೆ ತಕ್ಕ ಹಾಗೆ ಅವುಗಳನ್ನು ಬೆಳೆಯಬಹುದು.

ರೈತರು ನಿರಂತರವಾಗಿ 2–3 ಋತುಗಳವರೆಗೆ ಭತ್ತವನ್ನೇ ಬೆಳೆಯುವುದನ್ನು ತಪ್ಪಿಸಬೇಕು. ಸಾಂಬ ಬೆಳೆಯಾಗಿ ಮಾತ್ರ ಭತ್ತವನ್ನು ಬೆಳೆಯಬೇಕು. ಉಳಿದಂತೆ ವಾತಾವರಣದಲ್ಲಿ ತೇವಾಂಶವಿದ್ದಾಗ ಆ ಸಮಯವು ದ್ವಿದಳ ಧಾನ್ಯಗಳನ್ನು ಬೆಳೆಯುವುದಕ್ಕೆ ಸೂಕ್ತವಾಗಿರುತ್ತದೆ. ಆದ್ದರಿಂದ ಜನವರಿಯ ಮಧ್ಯಭಾಗದ ನಂತರ ದ್ವಿದಳ ಧಾನ್ಯಗಳನ್ನೇ ಬೆಳೆಯಬೇಕು. ಬೇಸಿಗೆಯ (ಏಪ್ರಿಲ್ – ಮೇ) ಸಮಯದಲ್ಲಿ ಮಣ್ಣು ಒಣಗಿರುತ್ತದೆ. ಆಗ ಸಿರಿಧಾನ್ಯಗಳಾದ ರಾಗಿ, ಸಜ್ಜೆ ಇತ್ಯಾದಿಗಳನ್ನು ಬೆಳೆಯಬೇಕು. ಈ ರೀತಿ ಹವಾಮಾನ ಪರಿಸ್ಥಿತಿಗೆ ತಕ್ಕಹಾಗೆ ರೈತರು ತಮ್ಮ ಕೃಷಿಪದ್ಧತಿಯನ್ನು ಯೋಜಿಸಿಕೊಳ್ಳಬೇಕು. ಭಾಸ್ಕರನ್ ಅವರ ಅನುಭವ ಇದಕ್ಕೊಂದು ಉತ್ತಮ ಉದಾಹರಣೆ.

ಶ್ರೀ ಭಾಸ್ಕರನ್ ಅವರನ್ನು ಸಂಪರ್ಕಿಸಬಹುದಾದ ವಿಳಾಸ: ತೇನಾಂಪಡುಗೈ, ಪಟ್ಟೀಶ್ವರಂ, ಕುಂಭಕೋಣಂ, ತಮಿಳುನಾಡು –612703. ದೂರವಾಣಿ ಸಂಖ್ಯೆ: 94428–71049. ■

**Suresh Kanna K**
Kudumbam,
No. 113/118, Sundaraj Nagar,
Subramaniyapuram,
Trichy - 620 020, Tamil Nadu, India
E-mail: sureshkanna_kudumbam@yahoo.in

**ಆಂಗ್ಲ ಮೂಲ**
ಲೀಸಾ ಇಂಡಿಯಾ, ಸಂಪುಟ 19, ಸಂಚಿಕೆ 2, ಜೂನ್ 2017

# ರಾಗಿ ಉತ್ಪಾದನೆಯಲ್ಲಿ ಹೆಚ್ಚಳ

## ಕೃಷಿ – ಪರಿಸರ ವಿಜ್ಞಾನದ ಹೊಸ ಆವಿಷ್ಕಾರ

■ ಲೂನಾ ಪಾಂಡಾ ಮತ್ತು ಮುರಳೀಧರ ಅಧಿಕಾರಿ

**ಕೃಷಿ ಉತ್ಪಾದನೆಗಳು ಹಲವಾರು ಜೈವಿಕ, ಅಜೈವಿಕ ಒತ್ತಡಗಳಿಗೆ ಸಿಲುಕುತ್ತವೆ. ಹವಾಮಾನದಲ್ಲುಂಟಾಗುವ ಬದಲಾವಣೆಗಳು ಬೆಳೆಗಳ ಉತ್ಪಾದನೆಯ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನು ಉಂಟುಮಾಡುತ್ತವೆ. ಬದಲಾಗುತ್ತಿರುವ ಹವಾಮಾನ ಪರಿಸ್ಥಿತಿಯಲ್ಲಿ ಸುಧಾರಿತ ಕೃಷಿಪದ್ಧತಿಗಳನ್ನು ಅನುಸರಿಸಿ ಒತ್ತಡವನ್ನು ತಾಳಿಕೊಳ್ಳಬಲ್ಲ ಬೆಳೆಗಳನ್ನು ಬೆಳೆಯುವುದರಿಂದ ಉತ್ಪಾದನೆಯಲ್ಲಿ ಸ್ಥಿರತೆಯನ್ನು ಕಾಪಾಡಿಕೊಳ್ಳಬಹುದು. ಸಿರಿಧಾನ್ಯಗಳನ್ನು ಹೆಚ್ಚಾಗಿ ಬೆಳೆಯುವುದು ಸ್ಥಿರತೆಯನ್ನು ಸಾಧಿಸುವ ಒಂದು ವಿಧಾನ. ಹಾಗಾಗಿ ಇತ್ತೀಚೆಗೆ ರಾಗಿಯ ಉತ್ಪಾದನೆ ಹೆಚ್ಚಿದೆ. ತೀವ್ರ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಲ್ಲೂ ಕೊರಪುಟ್ ಬುಡಕಟ್ಟು ಕುಟುಂಬಗಳಿಗೆ ಆಹಾರ ಮತ್ತು ಪೌಷ್ಟಿಕಾಂಶ ಭದ್ರತೆಯನ್ನು ಸಾಧಿಸಲು ಇದು ನೆರವಾಗಿದೆ.**

ದಕ್ಷಿಣ ಒಡಿಸ್ಸಾದ ಕೊರಪುಟ್ ಜಿಲ್ಲೆಯ ಮಳೆಯಾಧಾರಿತ ಪ್ರದೇಶಗಳಲ್ಲಿನ ರೈತಾಪಿ ಕುಟುಂಬಗಳ ಪ್ರಧಾನ ಆಹಾರಗಳಲ್ಲಿ ಭತ್ತ ಮೊದಲನೆಯ ಸ್ಥಾನದಲ್ಲಿ ಮತ್ತು ರಾಗಿ ಎರಡನೆಯ ಸ್ಥಾನದಲ್ಲಿವೆ. ಸಾಂಪ್ರದಾಯಿಕವಾಗಿ ಇದನ್ನು ಆಹಾರ ಭದ್ರತೆಗಾಗಿ ಬೆಳೆಯುತ್ತಾರೆ. ಇದು ಅವರಿಗೆ ಪೌಷ್ಟಿಕಾಂಶ ಭದ್ರತೆಯನ್ನು ಕೂಡ ನೀಡುತ್ತದೆ. ರಾಗಿಗೆ ತಾಳಿಕೆಯ ಶಕ್ತಿ ಹೆಚ್ಚು. ಮಣ್ಣು ಫಲವತ್ತಾಗಿಲ್ಲದಿರುವುದು, ಬರ ಪರಿಸ್ಥಿತಿಗಳಂತಹ ಕೃಷಿಗೆ ಪ್ರತಿಕೂಲವಾದ ಹಲವು ವಿಧದ ಹವಾಮಾನ ಪರಿಸ್ಥಿತಿಗಳನ್ನು ರಾಗಿ ತಾಳಿಕೊಳ್ಳಬಲ್ಲುದು. ಇದನ್ನು ಬೆಳೆಯಲು ಹೆಚ್ಚಿನ ನೀರಿನ ಅಥವ ಕೀಟನಾಶಕಗಳ ಅಗತ್ಯವಿಲ್ಲ. ಜೊತೆಗೆ ಯಾವುದೇ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳದೆಯೂ ಈ ಬೆಳೆಯನ್ನು ಬೆಳೆಯಬಹುದು. ರಾಗಿಯನ್ನು 10 ವರ್ಷಗಳ ಕಾಲ ಇಟ್ಟರೂ ಅದು ಹಾಳಾಗುವುದಿಲ್ಲ. ಅದಕ್ಕೆ ಯಾವುದೇ ವಿಧದ ಕೀಟಬಾಧೆ ತಟ್ಟುವುದಿಲ್ಲ. ಬೇರೆ ಬೆಳೆಗಳು ಕೈಕೊಟ್ಟಾಗಲೂ ರಾಗಿಯೊಂದೇ ವರ್ಷಪೂರ್ತಿ ಆಹಾರ ಒದಗಿಸಬಲ್ಲುದು. ಆದ್ದರಿಂದಲೇ ಇದಕ್ಕೆ **'ಬರದ ಬೆಳೆ'** ಎಂಬ ಹೆಸರು ಬಂದಿದೆ.

ಕೊರಪುಟ್ ಜಿಲ್ಲೆಯ ಬುಡಕಟ್ಟು ಪಂಗಡದ ರೈತರು ರಾಗಿಯನ್ನು ಏಕಬೆಳೆಯಾಗಿಯೂ ಬೆಳೆಯುತ್ತಾರೆ ಮತ್ತು ಇತರ ಸಿರಿಧಾನ್ಯಗಳೊಂದಿಗೆ, ದ್ವಿದಳ ಧಾನ್ಯಗಳೊಂದಿಗೆ, ಮೆಕ್ಕೆಜೋಳ ಮತ್ತು ಎಣ್ಣೆ ಕಾಳುಗಳೊಂದಿಗೆ ಮಿಶ್ರಬೆಳೆಯಾಗಿಯೂ ಬೆಳೆಯುತ್ತಾರೆ. ರೈತರು ಸಾಮಾನ್ಯವಾಗಿ ಬೀಜವನ್ನು ಚೆಲ್ಲುತ್ತ ಬಿತ್ತುವ ವಿಧಾನವನ್ನು ಅನುಸರಿಸುತ್ತಾರೆ. ಈ ವಿಧಾನದ ಬಿತ್ತನೆಯಿಂದ ತೇವಾಂಶ ಮತ್ತು ಪೌಷ್ಟಿಕಾಂಶಗಳು ಅಸಮರ್ಪಕವಾಗಿ ಬಳಕೆಯಾಗುವುದರಿಂದ ಇಳುವರಿ ಕಡಿಮೆಯಾಗುತ್ತದೆ. ಸಮಯಕ್ಕೆ ಸರಿಯಾಗಿ ಕಳೆಕೀಳುವುದು, ಕೀಟ ಮತ್ತು ಪೌಷ್ಟಿಕಾಂಶ ನಿರ್ವಹಣೆ ಮಾಡುವುದರತ್ತ ಅತಿ ಕಡಿಮೆ ಗಮನ ನೀಡಲಾಗುತ್ತದೆ. ಕಾಳುಗಳನ್ನು ಕೈಚೆಲ್ಲುವ ವಿಧಾನದಲ್ಲಿ ಸಿಗುವ ಇಳುವರಿ ಪ್ರತಿ ಎಕರೆಗೆ ಕೇವಲ ಮೂರರಿಂದ ನಾಲ್ಕು ಕ್ವಿಂಟಾಲ್. ಅದೇ ಸಾಂಪ್ರದಾಯಿಕ ಕಸಿವಿಧಾನದಲ್ಲಿ ಪ್ರತಿ ಎಕರೆಗೆ ಎಂಟರಿಂದ ಒಂಭತ್ತು ಕ್ವಿಂಟಾಲ್ ಇಳುವರಿ ಸಿಗುತ್ತದೆ. ರೈತರು ಸ್ಥಳೀಯ ಕೃಷಿಪರಿಸರ ವ್ಯವಸ್ಥೆಗೆ ಹೊಂದುವಂತಹ ಬೀಜಗಳನ್ನು ಆಯ್ಕೆ ಮಾಡಿಕೊಂಡು ಆ ತಳಿಗಳನ್ನು ಕಾಪಾಡಿಕೊಳ್ಳುತ್ತಾರೆ. ಪ್ರಸ್ತುತ ಮೂರು ಬಗೆಯ ರಾಗಿ ತಳಿಗಳನ್ನು (ಬಡಾ ಮಂಡಿಯ, ಕಾಲಾ ಮಂಡಿಯ ಮತ್ತು ಭೈರಬಿ) ಹೆಚ್ಚಾಗಿ ಬೆಳೆಯಲಾಗುತ್ತಿದೆ. ಅವುಗಳಲ್ಲಿ ಬಡಾ ಮಂಡಿಯ ತಳಿಯು ಹೆಚ್ಚು ಇಳುವರಿಯನ್ನು ಕೊಡುವುದರಿಂದ ಅದನ್ನೇ ಅಧಿಕವಾಗಿ ಬೆಳೆಯಲಾಗುತ್ತದೆ. ಗುಣಮಟ್ಟದ ಬೀಜಗಳು ಮತ್ತು ಶೇಖರಣೆ ಇವು ಇಂದಿಗೂ ರೈತರು ಎದುರಿಸುತ್ತಿರುವ ಪ್ರಮುಖ ತೊಂದರೆಗಳಾಗಿವೆ. ಈ ಎಲ್ಲ ಅಂಶಗಳು ಸಿರಿಧಾನ್ಯಗಳನ್ನು ಬೆಳೆಯಬಹುದಾದ ಪರಿಸರ ವ್ಯವಸ್ಥೆಗೆ ಮಾರಕವಾಗಿವೆಯಲ್ಲದೆ ಅವುಗಳ ಜೈವಿಕ ವೈವಿಧ್ಯವನ್ನು ನಷ್ಟಗೊಳಿಸಿವೆ. ಜೊತೆಗೆ ಸಾಂಪ್ರದಾಯಿಕ ಆಹಾರ ಸಂಸ್ಕೃತಿಯು ಈ ಧಾನ್ಯಗಳೊಂದಿಗೆ ಮೊದಲು ಹೊಂದಿದ್ದ ಸಂಬಂಧ ಕೂಡ ಇಲ್ಲವಾಗಿದೆ.

ಎಷ್ಟೋ ವರ್ಷಗಳವರೆಗೆ ರಾಗಿಯ ಬಗೆಗಿನ ಆಸಕ್ತಿ ಕಳೆಗುಂದಿತ್ತು. ಇದೇ ಕಾರಣದಿಂದ ಸೂಕ್ತ ನೆರವು ಕೂಡ ಸಿಗುತ್ತಿರಲಿಲ್ಲ. ಆದರೆ ಈಗ ನಗರದ ಆಹಾರ ಮಾರುಕಟ್ಟೆಯಲ್ಲಿ ರಾಗಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಈ ಲೇಖನವು ಪ್ರಗತಿ ಕೊರಪುಟ್ ಎನ್ನುವ ಸರ್ಕಾರೇತರ ಸಂಸ್ಥೆಯ ಅನುಭವವನ್ನು ಕುರಿತು ಹೇಳುತ್ತದೆ. ಈ ಸಂಸ್ಥೆಯು ದಕ್ಷಿಣ ಒಡಿಸ್ಸಾದ ಕೊರಾಪುಟ್ ಜಿಲ್ಲೆಯಲ್ಲಿ ಬೇಸಾಯ ಮಾಡುತ್ತಿದ್ದ ಸಣ್ಣ ರೈತರ ನಡುವೆ ರಾಗಿಯನ್ನು ಬೆಳೆಯುವ ಆಶಯವನ್ನು ಪುನಶ್ಚೇತನಗೊಳಿಸಿತು. ಈ ಕಾರ್ಯಕ್ರಮದ ಮುಖ್ಯ ಉದ್ದೇಶವೇ ಈ ಬೆಳೆಯ ಮೂಲಕ ಸಣ್ಣ ಹೊಲಗಳಲ್ಲಿ ಉತ್ಪಾದನೆಯನ್ನು ಹೆಚ್ಚಿಸುವುದು.

### ಎಸ್ಎಂಐ (System of Finger Millet Intensification (SMI)) – ರಾಗಿ ಬೇಸಾಯ ಕ್ರಮದ ಹೊಸ ಆವಿಷ್ಕಾರ

ಸುಧಾರಿತ ಬೇಸಾಯ ಕ್ರಮವಾದ ಶ್ರೀ ವಿಧಾನದಲ್ಲಿ ಭತ್ತದ ಬೆಳೆಯನ್ನು ಹೆಚ್ಚಿನ ಕ್ಷಮತೆ ಮತ್ತು ಸುಸ್ಥಿರತೆಯೊಂದಿಗೆ ಯಾವುದೇ ಬಾಹ್ಯಪರಿಕರಗಳನ್ನು ಅವಲಂಬಿಸದೆ ಬೆಳೆಯ ಅಂತರ್ವರ್ಧಕವನ್ನೇ ಆಧರಿಸಿ ಬೆಳೆಯಲಾಗುವುದು. 2008ರ ಶ್ರೀ ವಿಧಾನದ ಯಶಸ್ಸನ್ನು ನೋಡಿ ಪ್ರಗತಿ ಸಂಸ್ಥೆಯು ಅದೇ ತತ್ವಗಳನ್ನು ರಾಗಿ ಉತ್ಪಾದನೆಯ ಹೆಚ್ಚಳಕ್ಕೆ ಬಳಸಿತು.

2011ರಲ್ಲಿ ಪ್ರಗತಿ ಸಂಸ್ಥೆಯು ನಂದಪುರದಲ್ಲಿ ಎಸ್ಎಂಐನ ಪ್ರದರ್ಶನವನ್ನು ಆಯೋಜಿಸಿತು. ಆರಂಭದಲ್ಲಿ ಈ ಪದ್ಧತಿಯನ್ನು ಅನುಸರಿಸುವ ಬಗ್ಗೆ ರೈತರಲ್ಲಿ ಅನುಮಾನಗಳಿದ್ದರೂ, ಹಲವು ಸುತ್ತಿನ ಮಾತುಕತೆಗಳ ನಂತರ ಹನ್ನೊಂದು ಜನ ರೈತರು ಒಂದು ವೇಳೆ ಬೆಳೆ ನಷ್ಟವಾದರೆ ಪ್ರಗತಿ ಸಂಸ್ಥೆಯವರು ಪರಿಹಾರ ನೀಡಬೇಕು ಎನ್ನುವ ಷರತ್ತಿನೊಂದಿಗೆ ತಮ್ಮ ಅರ್ಧ ಎಕರೆಯಲ್ಲಿ ಶ್ರೀ ವಿಧಾನದಲ್ಲಿ ರಾಗಿಯನ್ನು ಬೆಳೆಯಲು ಒಪ್ಪಿದರು. ಎಸ್ಎಂಐ ಪದ್ಧತಿಯು ನರ್ಸರಿ ಆರಂಭಿಸುವುದು, ಸಸಿಗಳನ್ನು ನಾಟಿ ಮಾಡುವುದು, ಕಳೆ ಕೀಳುವುದು ಮತ್ತು ಸಾವಯವ ಗೊಬ್ಬರ ಹಾಕುವುದು



*ಶ್ರೀ ಸಸಿಗಳನ್ನು ಬೆಳೆಸಲು ನರ್ಸರಿಯಲ್ಲಿ ಬೆಡ್ ತಯಾರಿಸಲಾಗಿದೆ.*

ಮೊದಲಾದ ಚಟುವಟಿಕೆಗಳನ್ನು ಒಳಗೊಂಡಿದೆ.

ಈ ಸಂದರ್ಭದಲ್ಲಿ ಏಳು ಬಗೆಯ ಬೀಜಗಳನ್ನು ರೈತರಿಗೆ ಒದಗಿಸಲಾಯಿತು. ಜೊತೆಗೆ ಬೀಜಗಳ ಆಯ್ಕೆ, ಸಂರಕ್ಷಣೆ ಮತ್ತು ಬೀಜ ದ್ವಿಗುಣಗೊಳಿಸುವಿಕೆ ಕುರಿತು ತರಬೇತಿಯನ್ನೂ ನೀಡಲಾಯಿತು. ಇದಾದ ನಂತರ ಗುಣಮಟ್ಟದ ಬೀಜಗಳನ್ನು ರೈತರು ವೈಯುಕ್ತಿಕ ಹಾಗೂ ಸಾಮುದಾಯಿಕ ಎರಡೂ ವಿಧಾನಗಳಲ್ಲಿ ಬೀಜ ಬ್ಯಾಂಕುಗಳಲ್ಲಿ ಸಂರಕ್ಷಿಸಿಡುತ್ತಿದ್ದಾರೆ.

ಹೀಗೆ ನಡೆಸಲಾದ ಪ್ರಯೋಗದ ಫಲಿತಾಂಶವು ರೈತರಿಗೆ ಅಚ್ಚರಿಮೂಡಿಸುವಂತಿತ್ತು. ಪೈರಿಗೆ ಸರಾಸರಿ 12ರಿಂದ 18 ತೆಂಡೆಗಳು ಬಂದಿದ್ದವು. ಉತ್ತಮ ಜಮೀನನ್ನು ಹೊಂದಿದ್ದ ರೈತರೊಬ್ಬರ ಭೂಮಿಯಲ್ಲಿ ಪ್ರತಿ ಪೈರಿಗೆ 44–47 ತೆಂಡೆಗಳು ಬಂದಿದ್ದವು. ಸರಾಸರಿ ಇಳುವರಿ ಅರ್ಧ ಎಕರೆಗೆ 18 ಕ್ವಿಂಟಾಲ್ ಮತ್ತು ಅರ್ಧಎಕರೆಗೆ 26 ಕ್ವಿಂಟಾಲ್ ಅತ್ಯುತ್ತಮ ಇಳುವರಿ ಸಿಕ್ಕಿತ್ತು. ರೈತರಿಗೆ ಫಲಿತಾಂಶಗಳನ್ನು ತೋರಿಸಲು ಒಂದು ದಿನ ಕ್ಷೇತ್ರ ಭೇಟಿಯನ್ನು ನಿಗದಿಪಡಿಸಲಾಯಿತು. ಅಂದು ಕೃಷಿ ಇಲಾಖೆಯ ಸಿಬ್ಬಂದಿ ಕೂಡ ಭಾಗವಹಿಸಿದ್ದರು.

## ಪಸರಿಸು

ಎಸ್ಎಂಐ ವಿಧಾನದಲ್ಲಿನ ಸರಾಸರಿ ಇಳುವರಿ ಪ್ರತಿಎಕರೆಗೆ 12–14 ಕ್ವಿಂಟಾಲ್‌ಗಳಷ್ಟು. ಇದು ಸಾಂಪ್ರದಾಯಿಕ ವಿಧಾನದಲ್ಲಿ ಸಿಗುವ ಇಳುವರಿಗಿಂತ ಎರಡುಪಟ್ಟು ಹೆಚ್ಚು.

ಎಸ್ಎಂಐ ವಿಧಾನವನ್ನು ಅಳವಡಿಸಿಕೊಳ್ಳಲು ರೈತರಿಗೆ ಇದು ಪ್ರೋತ್ಸಾಹದಾಯಕ ಅಂಶವಾಗಿತ್ತು. ಆದರೂ ಈ ವಿಧಾನವು ಹೆಚ್ಚು ಶ್ರಮಿಕ ಪ್ರಧಾನವಾಗಿದೆಯೇನೋ ಎನ್ನುವ ಅನುಮಾನ ರೈತರಿಗಿತ್ತು. ವಿಡಿಯೋಗಳು, ಭಿತ್ತಿಚಿತ್ರಗಳು, ಸಮುದಾಯದ ಸಂಪನ್ಮೂಲ ವ್ಯಕ್ತಿಗಳ ನೆರವು, ರೈತ ಮೇಳಗಳು, ಕ್ಷೇತ್ರ ದಿನದ ಆಚರಣೆಗಳು, ರೈತರಿಗೆ ಸನ್ಮಾನ

**ಕೋಷ್ಟಕ 1 : ಎಸ್ಎಂಐ ವಿಧಾನದಲ್ಲಿ ವಿವಿಧ ಬಗೆಯ ತಳಿಗಳಲ್ಲಿ ಪಡೆದ ಸರಾಸರಿ ಇಳುವರಿ**

| ತಳಿಯ ಹೆಸರು | ಮಾದರಿ | ಕಾಲಾವಧಿ | ಸರಾಸರಿ ಇಳುವರಿ ಕ್ವಿಂಟಾಲ್/ ಎಕರೆ |
|---|---|---|---|
| ಬಡಾ ಮಂಡಿಯ (Bada Mandia) | ಸ್ಥಳೀಯ | 140 ದಿನಗಳು | 20 – 22 |
| ಕಾಲ ಮಂಡಿಯ (Kala Mandia) | ಸ್ಥಳೀಯ | 120 ದಿನಗಳು | 18 – 20 |
| ಭೈರಾಬಿ (Bhairabi) | ಹೆಚ್ಚು ಇಳುವರಿ | 120 ದಿನಗಳು | 20 – 22 |
| ಕರ್ನಾಟಕ (Karnataka) | ಹೆಚ್ಚು ಇಳುವರಿ | 140 ದಿನಗಳು | 25– 28 |
| ಆರ್ – 900 (R–900) | ಹೆಚ್ಚು ಇಳುವರಿ | 100 ದಿನಗಳು | 17–19 |
| ಗಮನಿಸಿ: ಕೊರಪುಟ್‌ನ ಕ್ಷೇತ್ರದಲ್ಲಿ ಎಸ್ಎಂಐ ವಿಧಾನದಲ್ಲಿ ಬೆಳೆದ ವಿವಿಧ ಬಗೆಯ ತಳಿಗಳ ಸರಾಸರಿ ಇಳುವರಿ | | | |

*ನಾಟಿಗೆ ಸಿದ್ಧವಾದ ಸಸಿಗಳು*





*ಕಳೆಗಿಡಗಳನ್ನು ಕಿತ್ತ ಬಳಿಕ ಕೊರಡನ್ನು ಬಳಸುವುದರಿಂದ ಸಸಿಗಳು ಚೆನ್ನಾಗಿ ಬೆಳೆಯುತ್ತವೆ.*

ಮಾಡುವುದು ಮೊದಲಾದ ವಿಧಾನಗಳ ಮೂಲಕ ಪ್ರಗತಿ ಸಂಸ್ಥೆಯು ಎಸ್‌ಎಂಐ ವಿಧಾನವನ್ನು ಜನಪ್ರಿಯಗೊಳಿಸಿತು.

ಪ್ರಗತಿ ಸಂಸ್ಥೆಯು ಹೊಸ ಕೃಷಿಪದ್ಧತಿಗಳನ್ನು ರೈತರ ಮೇಲೆ ಹೇರುವುದರ ಬದಲಾಗಿ ರೈತರೇ ಸ್ವತಃ ಆ ಆವಿಷ್ಕಾರಗಳನ್ನು ಕೈಗೊಳ್ಳುವಂತೆ ಪ್ರೋತ್ಸಾಹಿಸುತ್ತದೆ. ರೈತರು ಹೊಸ ವಿಧಾನಗಳನ್ನು ಪ್ರಯತ್ನಿಸಲು, ಸ್ಥಳೀಯ ಪರಿಸ್ಥಿತಿಗಳಿಗನುಗುಣವಾಗಿ ಅಳವಡಿಸಿಕೊಳ್ಳಲು ಮತ್ತು ತಮ್ಮದೇ ಮೌಲ್ಯಮಾಪನದ ಆಧಾರದ ಮೇಲೆ ವಿಧಾನಗಳನ್ನು ಅನುಸರಿಸಲು ಉತ್ತೇಜನ ನೀಡುತ್ತದೆ. ಉದಾಹರಣೆಗೆ ಮಣ್ಣು ಗಟ್ಟಿಯಾದರೆ ಕಳೆಯನ್ನು ಸಲಕರಣೆಗಳಿಂದ ಕೀಳುವುದು ಕಷ್ಟ. ಆಗ ರೈತರು ಕೈಯಿಂದಲೇ ಕಳೆಗಳನ್ನು ಕಿತ್ತು ನೇಗಿಲ ಸಹಾಯದಿಂದ ಭೂಮಿಯನ್ನು ಉಳಬೇಕು. ಕಳೆಗಿಡಗಳನ್ನು ಕಿತ್ತಬಳಿಕ ಕೊರಡನ್ನು ಬಳಸುವುದರಿಂದ ಸಸಿಗಳು ಚೆನ್ನಾಗಿ ಬೆಳೆದು ಇಳುವರಿ ಹೆಚ್ಚಾಗುತ್ತದೆ. ಇದು ಸ್ವತಃ ರೈತರ ಆವಿಷ್ಕಾರವಾಗಿದೆ.

ಈ ಎಲ್ಲ ಪ್ರಯತ್ನಗಳ ಫಲವಾಗಿ ರೈತರು ದೊಡ್ಡ ಮಟ್ಟದಲ್ಲಿ ಎಸ್‌ಎಂಐ ವಿಧಾನವನ್ನು ಅಳವಡಿಸಿಕೊಂಡರು. 2017ರ ಖರಿಫ್ ವೇಳೆಗೆ ಎಸ್‌ಎಂಐ ವಿಧಾನವನ್ನು ನಂದಪುರ, ಲಾಮ್ತಪುಟ್ ಮತ್ತು ಕೊಟ್‌ಪಾಡ್‌ನ 215 ಹಳ್ಳಿಗಳ, 3518 ರೈತರು, 927 ಹೆಕ್ಟೇರ್ ಭೂಮಿಯಲ್ಲಿ ಅಳವಡಿಸಿಕೊಂಡಿದ್ದಾರೆ.

## ಫಲಿತಾಂಶ

ಎಸ್‌ಎಂಐ ವಿಧಾನವನ್ನು ಅಳವಡಿಸಿಕೊಂಡಾಗ ಬೆಳೆಗಳಿಗೆ ಅತಿಯಾದ ಮಳೆ ಹಾಗೂ ಬರಗಾಲದಂತಹ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳನ್ನು ತಾಳಿಕೊಳ್ಳುವ ಶಕ್ತಿ ಹೆಚ್ಚಿರುವುದನ್ನು ಗಮನಿಸಲಾಯಿತು. 2012 ಮತ್ತು 2013ರಲ್ಲಿ ಆದಂತೆ ಅನಿರ್ದಿಷ್ಟ ಮಳೆ ಮತ್ತು ಬರಗಾಲದ ಪರಿಸ್ಥಿತಿಗಳಲ್ಲೂ ರೈತರು ಎಕರೆಗೆ ಸರಾಸರಿ 12–14 ಕ್ವಿಂಟಾಲ್ ರಾಗಿಯನ್ನು ಕೊಯ್ಲು ಮಾಡಿದರು. 2014ರ ಅಕ್ಟೋಬರ್‌ನಲ್ಲಿ ಉಂಟಾದ ಹುದುದ್ ಚಂಡಮಾರುತದ ಸಮಯದಲ್ಲಿ ಎಸ್‌ಎಂಐ ವಿಧಾನ ಅಳವಡಿಸಿಕೊಂಡ ಕ್ಷೇತ್ರಗಳು ಬದುಕುಳಿದವು. ಸಾಂಪ್ರದಾಯಿಕ ವಿಧಾನದಲ್ಲಿ ಬೆಳೆಸಲಾದ ಬೆಳೆಗಳು ಗಾಳಿಗೆ ಹಾನಿಗೊಳಗಾದವು. ನಂದಪುರದ ಮಲಿಪುಟ್ ಹಳ್ಳಿಯ ದಯಾನಿಧಿ ಖಾರಾ ಹೀಗೆ ಹೇಳುತ್ತಾರೆ 'ರಭಸವಾದ ಗಾಳಿಗೆ ಬಹುತೇಕ ಭತ್ತ ಮತ್ತು ರಾಗಿ ಗಿಡಗಳು ಬಿದ್ದುಹೋದವು. ಆದರೆ ಎಸ್‌ಎಂಐ ವಿಧಾನದಲ್ಲಿ ಬೆಳೆದ ರೊಬಸ್ಟ್ ರಾಗಿ ಮಾತ್ರ 2014ರ ಭಯಂಕರ ಚಂಡಮಾರುತದಲ್ಲೂ ಬದುಕುಳಿಯಿತು. ನಮ್ಮ ಕುಟುಂಬಕ್ಕೆ ಬೇಕಾದಷ್ಟು ರಾಗಿ ಫಸಲು ನಮಗೆ ಸಿಕ್ಕಿತು'.

ಪೈರುಗಳನ್ನು ನಾಟಿ ಮಾಡುವುದರಿಂದ ಸಾಲುಗಳ ನಡುವೆ ಹಾಗೂ ಪೈರುಗಳ ನಡುವಿನ ಕಳೆಯನ್ನು ನಿಯಂತ್ರಿಸಲು ಅನುಕೂಲವಾಗುತ್ತದೆ.

**2014ರಲ್ಲಿ ಅಕ್ಟೋಬರ್‌ನಲ್ಲಿ ಉಂಟಾದ ಹುದುದ್ ಚಂಡಮಾರುತದ ಸಮಯದಲ್ಲಿ ಎಸ್‌ಎಂಐ ವಿಧಾನ ಅಳವಡಿಸಿಕೊಂಡ ಕ್ಷೇತ್ರಗಳು ಬದುಕುಳಿದವು. ಸಾಂಪ್ರದಾಯಿಕ ವಿಧಾನದಲ್ಲಿ ಬೆಳೆಸಲಾದ ಬೆಳೆಗಳು ಗಾಳಿಗೆ ಹಾನಿಗೊಳಗಾದವು.**

**ಬಾಕ್ಸ್ 1: ಎಸ್‌ಎಂಐ ಪದ್ಧತಿಗಳು**

**ಪ್ರತಿ ಎಕರೆಗೆ 400–500 ಗ್ರಾಂ ಬೀಜ ಬೇಕಾಗುತ್ತದೆ. ಬೀಜಗಳ ಆಯ್ಕೆಯನ್ನು ಉಪ್ಪು ನೀರಿನ ದ್ರಾವಣ ಬಳಸಿ ಮಾಡಲಾಗುತ್ತದೆ. ಬೀಜಾಮೃತದ ಮೂಲಕ ಬೀಜೋಪಚಾರ ಮಾಡಲಾಗುತ್ತದೆ. ಸೂಕ್ಷ್ಮಜೀವಿಗಳು ಹಾಗೂ ಪೌಷ್ಟಿಕಾಂಶಗಳನ್ನು ಸಸಿಗಳಿಗೆ ನೀಡುವ ಮೂಲಕ ಅವುಗಳಲ್ಲಿ ಕೀಟ ಹಾಗೂ ರೋಗನಿರೋಧಕ ಶಕ್ತಿ ತುಂಬಲಾಗುತ್ತದೆ.**

**2:1ರ ಪ್ರಮಾಣದಲ್ಲಿ ಮಣ್ಣು ಮತ್ತು ಗೊಬ್ಬರವನ್ನು ಕಲಸಿ ಬೆಡ್ ತಯಾರಿಸಲಾಗುತ್ತದೆ. ಬೀಜಗಳನ್ನು ನರ್ಸರಿಯ ಮಣ್ಣಿನಲ್ಲಿ 1/2 ಇಂಚು ಆಳ ಮತ್ತು 3 ರಿಂದ 4 ಇಂಚು ಅಂತರದಲ್ಲಿ ಬಿತ್ತಲಾಗುತ್ತದೆ. ಎರೆಹುಳದ ಗೊಬ್ಬರ/ ಎಫ್‌ವೈಎಂ ಪುಡಿಯನ್ನು ಬೆಡ್ ಮೇಲೆ ಚೆಲ್ಲಿ, ತೆಳುವಾಗಿ ಹುಲ್ಲಿನ ಹೊದಿಕೆಯನ್ನು ಹೊದಿಸಲಾಗುತ್ತದೆ. ನಂತರ ಇದಕ್ಕೆ ದಿನದಲ್ಲಿ ಒಂದು ಬಾರಿ ನೀರುಣಿಸಲಾಗುತ್ತದೆ. 15 ದಿನಗಳಲ್ಲಿ ಸಸಿಗಳು ನಾಟಿಗೆ ಸಿದ್ಧವಾಗುತ್ತವೆ.**

**ಭೂಮಿಯನ್ನು 8–10 ದಿನಗಳೊಳಗೆ ಎರಡು ಮೂರು ಬಾರಿ ಚೆನ್ನಾಗಿ ಉಳಬೇಕು. ಭೂಮಿಯನ್ನು ಹದಮಾಡುವಾಗಲೇ ಬೇವು/ಹೊಂಗೆ ಹಿಂಡಿಯನ್ನು ಹಾಕಬೇಕು. ಭೂಮಿಯನ್ನು ಉಳುಮೆ ಮಾಡಿದ ನಂತರ ಕೊರಡಿನಿಂದ ಸಮಮಾಡಬೇಕು.**

**15–18 ದಿನಗಳ ಸಸಿಗಳನ್ನು ಹೊಲದಲ್ಲಿ ನಾಟಿ ಮಾಡಬಹುದು. ನಾಟಿಮಾಡಲು ಒಯ್ಯುವಾಗ ಸಸಿಗಳ ಬೇರಿಗೆ ಮಣ್ಣು ಅಂಟಿಕೊಂಡಿರಬೇಕು ಹಾಗೂ ಹೊಲದಲ್ಲಿ ತೇವಾಂಶವಿರಬೇಕು. ಪ್ರತಿ ಸಸಿಯ ನಡುವೆ 25 *X* 25 ಸೆಂ.ಮೀ. ಅಂತರವನ್ನು ಗುರುತು ಮಾಡಿಕೊಳ್ಳಬೇಕು. ಸಸಿಗಳನ್ನು ನೆಡುವಾಗ ಕೊಟ್ಟಿಗೆ ಗೊಬ್ಬರ ಮತ್ತು ಎರೆಹುಳದ ಗೊಬ್ಬರಗಳನ್ನು ಗುಳಿಯಲ್ಲಿ ಹಾಕಬೇಕು.**

**ಸಸಿಗಳನ್ನು ನಾಟಿ ಮಾಡಿದ 15–20 ದಿನಗಳ ನಂತರ ರೋಲರ್ ವೀಡರ್ ಅಥವ ಸೈಕಲ್ ಬಳಸಿ ಕಳೆಕೀಳಬೇಕು. ಎರಡು ಮತ್ತು ಮೂರನೇ ಬಾರಿ ಕಳೆ ಕೀಳುವಾಗ ಕೂಡ ಮಣ್ಣು ಗಟ್ಟಿಯಾಗಿರುವುದರಿಂದ ರೋಲರ್ ವೀಡರ್ ಮೂಲಕ ಅಥವಾ ಕೈಯಲ್ಲಿ ಕೀಳಬೇಕು. ಎರೆಹುಳ ಗೊಬ್ಬರ ಅಥವ ಜೀವಾಮೃತ ದ್ರಾವಣವನ್ನು ಪ್ರತಿ ಬಾರಿ ಕಳೆ ಕಿತ್ತ ನಂತರ ಹಾಕಬೇಕು.**

**ಕೀಟ ನಿಯಂತ್ರಣಕ್ಕೆ ಬೇವಿನೆಣ್ಣೆ ದ್ರಾವಣವನ್ನು ಸಿಂಪಡಿಸಬೇಕಾಗುವುದು.**

**ಇಲ್ಲಿನ ಭೂಮಿಗೆ ಮಳೆನೀರು ಸಿಗುವುದರಿಂದ ನೀರಿನ ನಿರ್ವಹಣೆ ಮಾಡುವ ಅಗತ್ಯವಿಲ್ಲ.**

ರೈತರು ಕಳೆ ಕೀಳಲು ರೋಲರ್ ವೀಡರ್‌ಗಳಂತಹ ಸಲಕರಣೆಗಳನ್ನು ಬಳಸುತ್ತಿದ್ದಾರೆ. ಇವು ಕಳೆಗಿಡಗಳನ್ನು ಮಣ್ಣಿಗೆ ಸೇರಿಸುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚುತ್ತದೆ. ಮಣ್ಣಿಗೆ ಗಾಳಿ ಮೊದಲಾದ ಪೋಷಕಾಂಶಗಳು ಸರಾಗವಾಗಿ ಸೇರುವುದರಿಂದ ಗಿಡಗಳು ಹೆಚ್ಚು ಆಳವಾಗಿ, ಗಟ್ಟಿಯಾಗಿ ಬೇರುಬಿಡುತ್ತವೆ. ಇದರಿಂದಾಗಿ ಬಿರುಸಾದ ಗಾಳಿಯನ್ನು ತಾಳಿಕೊಳ್ಳುವ ಶಕ್ತಿ ಗಿಡಗಳಿಗಿರುತ್ತದೆ. ರೋಲರ್ ವೀಡರ್ ಬಳಕೆಯೊಂದಿಗೆ ಗಂಡಸರು ಕಳೆಕೀಳುವ ಜವಾಬ್ದಾರಿಗಳನ್ನು ಹಂಚಿಕೊಳ್ಳಲಾರಂಭಿಸಿದರು. ಕಳೆ ಕೀಳಲು ಕೂಲಿಯಾಳುಗಳನ್ನು ಅವಲಂಬಿಸುವುದು ತಗ್ಗಿತು.

ಗಿಡಗಳು ಒಂದೇ ಎತ್ತರಕ್ಕೆ ಬೆಳೆದುದರಿಂದ ಕೊಯ್ಲು ಮಾಡಲು ಸುಲಭವಾಯಿತು. ಬಲಿತ ತೆನೆಗಳು ಒಂದಕ್ಕೊಂದು ಬೆಸೆದುಕೊಳ್ಳುವುದಿಲ್ಲ. ಹೆಣ್ಣುಮಕ್ಕಳಿಗೆ ಎಸ್‌ಎಂಐ ಕ್ಷೇತ್ರಗಳಲ್ಲಿ ತೆನೆಕೊಯ್ಲು ಮಾಡುವುದು ಸುಲಭವೆನಿಸಿತು. ಸಾಂಪ್ರದಾಯಿಕವಾಗಿ ಬಿತ್ತನೆ ಮಾಡಿದ ಹೊಲಗಳಲ್ಲಿ ಕೊಯ್ಲು ಮಾಡಲು ಬೇಕಾಗುವ ಸಮಯದಲ್ಲಿ ಅರ್ಧದಷ್ಟು ಸಮಯ ಮಾತ್ರ ಅವರಿಗೆ ಈ ಹೊಲಗಳಲ್ಲಿ ಕೆಲಸ ಮುಗಿಸಲು ಸಾಕಾಗುತ್ತಿತ್ತು. ಇದರಿಂದ ಮಹಿಳೆಯರ ಶ್ರಮ ಕಡಿಮೆಯಾಯಿತು.

ಸಣ್ಣ ಪ್ರಮಾಣದ ಭೂಮಿಯನ್ನು ಹೊಂದಿದ್ದ ದುರ್ಬಲ ಸಮುದಾಯಗಳಿಗೂ ಕೂಡ ಉತ್ಪಾದನೆ ಹೆಚ್ಚಿದ್ದರಿಂದ ಪೌಷ್ಟಿಕ ಆಹಾರ ಭದ್ರತೆ ಸಿಕ್ಕಿತು. ಈಗ ಎಸ್‌ಎಂಐ ವಿಧಾನವನ್ನು ಅಳವಡಿಸಿಕೊಂಡ ರೈತ ಕುಟುಂಬಗಳಿಗೆ ವರ್ಷಕ್ಕೆ ಸಾಕಾಗುವಷ್ಟು ಸಿರಿಧಾನ್ಯಗಳು ಸಿಗುತ್ತಿವೆ. ಇಳುವರಿ ಹೆಚ್ಚಿದ್ದರಿಂದ ತಮ್ಮ ಬಳಕೆಗೆ ಸಾಕಾಗಿ ಉಳಿದ ಧಾನ್ಯವನ್ನು ಅವರು ಮಾರಾಟ ಮಾಡುವಂತಾಗಿದೆ. ರಾಗಿಯ ಮಾರುಕಟ್ಟೆ ವಿಸ್ತಾರಗೊಳ್ಳುತ್ತಿರುವುದರಿಂದ 2009ರಲ್ಲಿ ಕೆ.ಜಿಗೆ ರೂ.5ರಿಂದ 7ರವರೆಗೆ ಇದ್ದದ್ದು 2017ರ ವೇಳೆಗೆ ರೂ.22–25ರಷ್ಟಾಗಿದೆ. ಇದರಿಂದ ಉತ್ತಮ ಆದಾಯ ಸಿಗುವಂತಾಗಿದೆ.

## ಕ್ರಮಿಸಬೇಕಾದ ಹಾದಿ

ಎಸ್‌ಎಂಐ ಹಸಿವಿನ ನಿವಾರಣೆಗೆ ಪರಿಹಾರ ಮಾತ್ರವಲ್ಲ ಪ್ರತಿಕೂಲ ಹವಾಮಾನ ಬದಲಾವಣೆಗಳನ್ನು ಎದುರಿಸುವ ಸಮರ್ಥ ವಿಧಾನವೂ ಆಗಿದೆ. ಅಧಿಕ ಉತ್ಪಾದನೆ, ಪ್ರತಿಕೂಲ ಹವಾಮಾನ ಪರಿಸ್ಥಿತಿಗಳನ್ನು ತಾಳಿಕೊಳ್ಳುವ ಶಕ್ತಿ, ಮಹಿಳೆಯರ ಶ್ರಮ ಕಡಿಮೆಗೊಳಿಸಿರುವುದು – ಈ ವಿಧಾನದ ಕೊಡುಗೆಗಳಾಗಿವೆ. ಅಂದಮಾತ್ರಕ್ಕೆ ಇದರಲ್ಲಿ ಸವಾಲುಗಳೇ ಇಲ್ಲ ಎಂದರ್ಥವಲ್ಲ. ಎಸ್‌ಎಂಐನಲ್ಲಿ ಉತ್ಪಾದನೆ ಹೆಚ್ಚಾದಂತೆ ಎದುರಾಗುವ ಮೊದಲ ಸವಾಲು ಸಂಸ್ಕರಣೆಯದು. ಅಂದರೆ ಹೊಟ್ಟುಬಿಡಿಸಿ ಸ್ವಚ್ಛಗೊಳಿಸುವುದು. ಇದು ಹೆಚ್ಚು ಸಮಯ ಬೇಡುವ ಮತ್ತು ಮಹಿಳೆಯರಿಗೆ ತ್ರಾಸದಾಯಕ ಕೆಲಸ. ಸಿರಿಧಾನ್ಯ ಉತ್ಪಾದಕ ಸಮೂಹಗಳಲ್ಲಿ ಪ್ರಾಥಮಿಕ ಸಂಸ್ಕರಣ ಘಟಕಗಳಿಲ್ಲ. ರೈತರ ಬಳಿ ಉತ್ಪಾದನೆಯನ್ನು ಶೇಖರಿಸಿಡಲು ಅಗತ್ಯವಿರುವಷ್ಟು ಸ್ಥಳ ಇಲ್ಲದಿರುವುದು ಕೂಡ ಸಮಸ್ಯೆಯಾಗಿದೆ. ಈ ಒತ್ತಡವು ಮಧ್ಯವರ್ತಿಗಳಿಗೆ ಬೆಳೆ ಮಾರಾಟ ಮಾಡಲು ಕಾರಣವಾಗುತ್ತದೆ. ರೈತರನ್ನು ಸಂಘಟಿಸುವುದು, ಸರ್ಕಾರದ ಸಹಯೋಗವನ್ನು ಗಳಿಸಿಕೊಳ್ಳುವುದು ಮತ್ತು ಸೂಕ್ತ ನೀತಿಯ ನೆರವು ಪಡೆಯುವುದು ಈ ನಿಟ್ಟಿನಲ್ಲಿ ಮುಖ್ಯವಾಗಿ ಎದುರಿಸಬೇಕಾಗಿರುವ ಸವಾಲುಗಳು.

## ಕೃತಜ್ಞತೆಗಳು

ಪ್ರಗತಿ ಕೊರಪುಟ್ ಸಂಸ್ಥೆ ತಮ್ಮ ಜಮೀನಿನಲ್ಲಿ ತಂತ್ರಜ್ಞಾನವನ್ನು ಪ್ರದರ್ಶಿಸಿದ ಮತ್ತು ಸಹಕಾರಿ ನೀಡಿದ ರೈತರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಒಡಿಸ್ಸಾದ ಬುಡಕಟ್ಟು ಭಾಗಗಳಲ್ಲಿ ಸಿರಿಧಾನ್ಯಗಳನ್ನು ವಿಶೇಷ ಕಾರ್ಯಕ್ರಮದಡಿ ಪರಿಚಯಿಸಿದ ತ್ರೊಕ್ರೈರೆ, ಎಸ್‌ಡಿಟಿಟಿ, ಭಾರತ ಸರ್ಕಾರ ಮತ್ತು ಒಡಿಸ್ಸಾ ಸರ್ಕಾರಕ್ಕೆ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ರೈತಸ್ನೇಹಿ ವಿಡಿಯೋಗಳನ್ನು ಮಾಡಿಕೊಡುವ ಮೂಲಕ ತಾಂತ್ರಿಕ ನೆರವು ನೀಡಿದ ಡಿಜಿಟಲ್ ಗ್ರೀನ್‌ನವರಿಗೆ ಕೃತಜ್ಞತೆಗಳು. ■

**Luna Panda**
Executive Director
**Muralidhar Adhikari**
Team Leader
Pragati Koraput, Pujariput, Koraput- 764020
Odisha
E-mail :pragatikoraput@gmail.com
www.pragatikoraput.org

**ಆಂಗ್ಲ ಮೂಲ**
ಲೀಸಾ ಇಂಡಿಯಾ, ಸಂಪುಟ 19, ಸಂಚಿಕೆ 2, ಜೂನ್ 2017



*ಕೆರ್ವಾವಾಲ್ ರೈತರು ತಮ್ಮ ಬದುಕಿಗಾಗಿ ಕೃಷಿ ಹಾಗೂ ಪಶುಸಂಗೋಪನೆಯನ್ನು ಅವಲಂಬಿಸಿದ್ದಾರೆ.*

# ಸಿರಿಧಾನ್ಯಗಳ ಪುನಶ್ಚೇತನದ ಮೂಲಕ ಸಂಸ್ಕೃತಿಯೊಂದಿಗೆ ಬೆಸುಗೆ

■ **ಅಮನ್ ಸಿಂಗ್ ಮತ್ತು ಪ್ರತಿಭಾ ಸಿಸೊಡಿಯ**

**ರಾಜಸ್ಥಾನದ ಕೆರ್ವಾವಾಲ್ ಪಂಚಾಯ್ತಿಗೆ ಸೇರಿದ ರೈತರು ಸಜ್ಜೆಯಾಧಾರಿತ ಬೆಳೆವ್ಯವಸ್ಥೆಯನ್ನು ಪುನಶ್ಚೇತನಗೊಳಿಸಿ, ಅನುಸರಿಸುವುದರಿಂದ ನೀರಿಲ್ಲದೇ ಒಣಗುವ ಹತ್ತಿ, ಈರುಳ್ಳಿ ಮತ್ತು ಗೋಧಿ ಬೆಳೆಗಳಿಂದ ಮುಕ್ತಿ ಹೊಂದಬಹುದು ಎನ್ನುವುದನ್ನು ಕಂಡುಕೊಂಡರು. ಸಿರಿಧಾನ್ಯಗಳನ್ನು ಬೆಳೆಯುವ ಕ್ರಮವನ್ನು ಪುನಶ್ಚೇತನಗೊಳಿಸಿದ್ದರಿಂದ ಅವರಿಗೆ ಆಹಾರ ಮತ್ತು ಮೇವು ಎರಡೂ ಸಿಗುವಂತಾಯಿತು. ಇದರೊಂದಿಗೆ ಸಜ್ಜೆಯನ್ನು ಕೇಂದ್ರವಾಗಿಟ್ಟುಕೊಂಡ ತಮ್ಮ ಸಾಂಪ್ರದಾಯಿಕ ಸಂಸ್ಕೃತಿಯೊಂದಿಗೆ ಈ ರೈತ ಕುಟುಂಬಗಳು ಮತ್ತೆ ಸಂಬಂಧ ಬೆಸೆದುಕೊಳ್ಳುವಂತಾಯಿತು.**

ಕೆರ್ವಾವಾಲ್ ಪಂಚಾಯ್ತಿಯ ಅಡಿಯಲ್ಲಿ ಕೆರ್ವಾವಾಲ್, ಕೆರ್ವಾಡಿ ಮತ್ತು ಪಿಲಧಾಬ ಹಳ್ಳಿಗಳು ಬರುತ್ತವೆ. ಇವು ರಾಜಸ್ಥಾನದ ಈಶಾನ್ಯ ಭಾಗದಲ್ಲಿವೆ. ಈ ಪಂಚಾಯ್ತಿಯ ಪೂರ್ವಕ್ಕೆ ಬೆಟ್ಟಗಳ ಶ್ರೇಣಿಯಿದ್ದು, ಪಶ್ಚಿಮದಲ್ಲಿ ಸ್ಥಳೀಯವಾಗಿ 'ಸುಖ್ರಿ' ಎಂದು ಕರೆಯಲ್ಪಡುವ ನದಿಯಿದೆ. ಇವು ಈ ಪ್ರದೇಶಕ್ಕೆ ನೈಸರ್ಗಿಕ ಗಡಿಗಳಾಗಿವೆ. ಪೂರ್ವದಿಂದ ಪಶ್ಚಿಮದವರೆಗೂ ಈ ಭೂಭಾಗವು ಕಂದರಗಳು, ಇಳಿಜಾರು ಪ್ರದೇಶಗಳಿಂದ ಕೂಡಿದೆ. ಇವುಗಳ ನಡುವೆಯೇ ಭೂಮಿಯ ಹೆಚ್ಚಿನ ಭಾಗವನ್ನು ಕೃಷಿಗಾಗಿ ಸಮತಟ್ಟುಗೊಳಿಸಲಾಗಿದೆ. ಬೆಟ್ಟಗಳ ತಪ್ಪಲಲ್ಲಿ ದೇವಬನ (ದೇವರಕಾಡು) ಸಮುದಾಯದವರ ಸಂರಕ್ಷಿತ ಅರಣ್ಯವು ಸ್ವಲ್ಪ ಭಾಗವನ್ನು ಆವರಿಸಿಕೊಂಡಿದ್ದು, ಇಲ್ಲಿನ ಜನರು ತಮ್ಮ ಜೀವನೋಪಾಯಕ್ಕಾಗಿ ಕೃಷಿ ಮತ್ತು ಪಶುಸಂಗೋಪನೆಯನ್ನು ಅವಲಂಬಿಸಿದ್ದಾರೆ. ರೈತರು ತಮ್ಮ ಆದಾಯದ ಸುಮಾರು 30%ರಷ್ಟನ್ನು ಪಶುಸಂಗೋಪನೆ ಹಾಗೂ ಜಾನುವಾರು ಆಧಾರಿತ ಚಟುವಟಿಕೆಗಳಿಂದಲೇ ಗಳಿಸುತ್ತಾರೆ.

ಈ ಪಂಚಾಯ್ತಿಯಲ್ಲಿ ಮಿಶ್ರಬೆಳೆ ಪದ್ಧತಿಯು ದೊಡ್ಡ ಮಟ್ಟದ ಕೃಷಿವ್ಯವಸ್ಥೆಗೆ ದಾರಿಮಾಡಿಕೊಟ್ಟಿದೆ. ಕಣಿವೆ ಪ್ರದೇಶಗಳು ಹಾಗೂ ಬೆಟ್ಟದ ತಪ್ಪಲಲ್ಲಿ ಕೃಷಿ ಮಾಡಲಾಗುತ್ತದೆ. ಇದರಿಂದ ಸಿಗುವ ಆದಾಯ ಜೀವನಾಧಾರಕ್ಕೆ ಅಗತ್ಯವಾದ ಕನಿಷ್ಟ ಆದಾಯಕ್ಕಿಂತ ಕೆಳಮಟ್ಟದಲ್ಲಿದೆ. ಇಲ್ಲಿ ಒಣಭೂಮಿಯ ಬೇಸಾಯ ಪದ್ಧತಿಯನ್ನು ಅನುಸರಿಸಲಾಗುತ್ತದೆ. ಪ್ರತಿ ಕುಟುಂಬ ಹೊಂದಿರುವುದು 0.4 ಎಕರೆಯಿಂದ 2.5 ಎಕರೆಗಳಷ್ಟು ಜಮೀನು ಮಾತ್ರ. ಖಾರಿಫ್ ಬೆಳೆಗಳು ಸಜ್ಜೆ, ಮೆಕ್ಕೆಜೋಳ, ಹತ್ತಿ, ಜೋಳ; ಎಳ್ಳು; ಹೆಸರು; ಕಡಲೆ; ಗೋರಿಕಾಯಿಗಳನ್ನು ಒಳಗೊಂಡಿರುತ್ತವೆ. ರಾಬಿ ಬೆಳೆಗಳು ಈರುಳ್ಳಿ, ಗೋಧಿ, ಸಾಸಿವೆ, ಕಾಳು ಮತ್ತು ಬಾರ್ಲಿಯನ್ನು ಒಳಗೊಂಡಿರುತ್ತವೆ. ತರಕಾರಿಗಳನ್ನು ಹೆಚ್ಚಾಗಿ ಮನೆಯ ಹಿತ್ತಿಲಲ್ಲಿ ಬೆಳೆಯುತ್ತಾರೆ. ವರ್ಷದಲ್ಲಿ

ಸರಾಸರಿ ಎರಡು ಬೆಳೆಗಳನ್ನು ಬೆಳೆಯಲಾಗುತ್ತದೆ. ಕೊಳವೆಬಾವಿಯ ಸೌಕರ್ಯ ಇರುವೆಡೆ ಮಾತ್ರ ಬೇಸಿಗೆಯಲ್ಲಿ ಮೂರನೆಯ ಬೆಳೆಯನ್ನು ಬೆಳೆಯಲಾಗುತ್ತದೆ.

ಸಾಂಪ್ರದಾಯಿಕ ತಳಿಗಳಿಂದ ಹೈಬ್ರೀಡ್ ತಳಿಗಳೆಡೆಗೆ ಬರಲು ಎರಡು ಮುಖ್ಯ ಕಾರಣಗಳೆಂದರೆ: ಮಳೆಯ ಕೊರತೆಯ ನಡುವೆಯೇ ಕಡಿಮೆ ಅವಧಿಯಲ್ಲಿ ಸಿಕ್ಕುವ ಹೆಚ್ಚಿನ ಪ್ರಮಾಣದ ಇಳುವರಿ. ಕೃಷಿಯು ಬಹುತೇಕ ಯಾಂತ್ರೀಕೃತವಾಗಿದೆ. ಭೂಮಿಗೆ ನೀರುಣಿಸಲು ಆಳವಾದ ಕೊಳವೆಬಾವಿಗಳಿಂದ ನೀರೆತ್ತಲಾಗುತ್ತದೆ. ಬೆಳೆಗಳು ಹೆಚ್ಚು ನೀರನ್ನು ಬೇಡುತ್ತವೆ. ಅದರಲ್ಲೂ ರಾಬಿ ಬೆಳೆಗಳಿಗೆ ನೀರಿನ ಅವಶ್ಯಕತೆ ಹೆಚ್ಚು. ಸಣ್ಣ ಭೂಮಿಯನ್ನು ಹೊಂದಿರುವ ಕೆಲವು ಕುಟುಂಬಗಳು ಮಿಶ್ರಬೆಳೆ ಪದ್ಧತಿಯನ್ನು ಅನುಸರಿಸುತ್ತಿವೆ.

## ಸಿರಿಧಾನ್ಯಗಳ ಪುನಶ್ಚೇತನ

2011–12ರಲ್ಲಿ KRAPAVIS(ಕೃಷಿ ಏವಂ ಪರಿಸ್ಥಿತಿಕಿ ವಿಕಾಸ ಸಂಸ್ಥಾನ್) ಕೆರ್ವಾವಾಲ ಪಂಚಾಯ್ತಿಯಲ್ಲಿ ಸಿರಿಧಾನ್ಯಗಳನ್ನು ಬೆಳೆವ ಭೂಮಿ ಕಡಿಮೆಯಾಗುತ್ತಿರಲು ಕಾರಣಗಳೇನು ಎನ್ನುವುದನ್ನು ತಿಳಿಯಲು ಅಧ್ಯಯನವೊಂದನ್ನು ನಡೆಸಿತು. ಅಧ್ಯಯನದಲ್ಲಿ ಕಳೆದ 10 ವರ್ಷಗಳಲ್ಲಿ ಸಿರಿಧಾನ್ಯಗಳನ್ನು ಬೆಳೆಯುತ್ತಿದ್ದ ಭೂಮಿಯಲ್ಲಿ ಶೇ.25 ಭಾಗ ಕಡಿಮೆಯಾಗಿರುವುದು ತಿಳಿದುಬಂತು. ವಾಣಿಜ್ಯಬೆಳೆಗಳಾದ ಹತ್ತಿ ಮತ್ತು ಈರುಳ್ಳಿ; ಸಿರಿಧಾನ್ಯಗಳಿಗೆ ಸೂಕ್ತ ಬೆಲೆ ಸಿಗದಿರುವುದು; ಸರ್ಕಾರಿ ಗೋದಾಮು ಸೌಲಭ್ಯಗಳ ಕೊರತೆ; ಸಜ್ಜೆಯನ್ನು ನ್ಯಾಯಬೆಲೆ ಅಂಗಡಿಗಳಲ್ಲಿ ಅಥವಾ ಅಂಗನವಾಡಿಗಳಲ್ಲಿ ವಿತರಿಸದಿರುವುದು, ಸಜ್ಜೆಯ ಹೊಟ್ಟನ್ನು ಸರ್ಕಾರಿ ಮೇವು ಬ್ಯಾಂಕುಗಳಲ್ಲಿ ಸ್ವೀಕರಿಸದಿರುವುದು, ವಿಮಾ ಕಂಪನಿಗಳು ಈ ಬೆಳೆಗೆ ವಿಮೆಯನ್ನು ಒದಗಿಸಲು ಹಿಂಜರಿಯುವುದು –ಮೊದಲಾದ ಕಾರಣಗಳಿಂದ ಸಿರಿಧಾನ್ಯಗಳನ್ನು ಬೆಳೆಯುತ್ತಿಲ್ಲ ಎಂದು ರೈತರು ಹೇಳುತ್ತಾರೆ.

ಪಂಚಾಯ್ತಿ ವ್ಯವಸ್ಥೆಯಲ್ಲಿ ಸಾರ್ವಜನಿಕ ವಿತರಣಾ ಪದ್ಧತಿಯು ಕಳೆದ ನಾಲ್ಕು ದಶಕಗಳಿಂದ ಇರುವುದನ್ನು KRAPAVIS ಸಮೀಕ್ಷೆಯು ಗುರುತಿಸಿದೆ. ಈ ವ್ಯವಸ್ಥೆಯ ಮೂಲಕ ಕೇವಲ ಅಕ್ಕಿ, ಗೋಧಿ ಮತ್ತು ಸಕ್ಕರೆಯನ್ನು ಪೂರೈಸಲಾಗುತ್ತದೆ. ಈ ಮೂರು ವಸ್ತುಗಳನ್ನು ಸ್ಥಳೀಯವಾಗಿ ಬೆಳೆಯುವುದಿಲ್ಲ. ಇವುಗಳನ್ನು ಹೊರಗಿನಿಂದ ತರಿಸಲಾಗುತ್ತದೆ. ಸ್ಥಳೀಯವಾಗಿ ಬೆಳೆಯುವ ಸಜ್ಜೆಗೆ ಗ್ರಾಹಕರಿಲ್ಲ. ಇದರಿಂದಾಗಿ ಆಹಾರ ಪದ್ಧತಿಗಳಲ್ಲಿ ಬದಲಾವಣೆಯಾಗಿ ಹೊರಗಿನ ವಸ್ತುಗಳ ಮೇಲಿನ ಅವಲಂಬನೆ ಹೆಚ್ಚಾಗಿದೆ. (ನೋಡಿ ಕೋಷ್ಟಕ 1)

ಕುಂಠಿತಗೊಂಡಿರುವ ಸಿರಿಧಾನ್ಯಗಳ ಕೃಷಿಯ ಸಮಸ್ಯೆಯನ್ನು, ಸವಾಲುಗಳನ್ನು ನಿವಾರಿಸಿ ಅವುಗಳನ್ನು ಬೆಳೆಯುವ ವಿಧಾನಗಳನ್ನು ಪುನಶ್ಚೇತನಗೊಳಿಸಲು KRAPAVIS ರೈತರನ್ನೂ ಸೇರಿಸಿಕೊಂಡು ಹಲವಾರು ಕ್ರಮಗಳನ್ನು ಕೆರ್ವಾವಾಲ್ ಪಂಚಾಯ್ತಿ ತನ್ನ ಯೋಜನೆಗಳ ಅಡಿಯಲ್ಲಿ ಕೈಗೊಂಡಿತು.

ರೈತರೊಂದಿಗೆ ಹಲವು ಸಭೆಗಳನ್ನು ಆಯೋಜಿಸಿ ಸಜ್ಜೆ ಬೆಳೆಯ ಮಹತ್ವವನ್ನು ಚರ್ಚಿಸಲಾಯಿತು. ಸುಮಾರು ಎರಡು ದಶಕಗಳಿಂದ ಕೆರ್ವಾವಾಲ್ ರೈತರು ಹಿಂದೆ ಸಜ್ಜೆಯನ್ನು ಬೆಳೆಯುತ್ತಿದ್ದ ಭೂಮಿಯಲ್ಲಿ ವಾಣಿಜ್ಯ ಬೆಳೆಗಳಾದ ಹತ್ತಿ ಮತ್ತು ಈರುಳ್ಳಿಯನ್ನು ಬೆಳೆಯಲಾರಂಭಿಸಿದ್ದಾರೆ. ಚರ್ಚೆಯ ಸಮಯದಲ್ಲಿ ಕೆರ್ವಾವಾಲ್‌ನ ಹಿರಿಯ ರೈತರಾದ ಧನುರಾಂ ಪ್ರಜಾಪತ್, ದಾಶರಥ ಸಿಂಗ್, ಧನ್‌ಕೋರಿ ದೇವಿ, ಸಂತೋ ದೇವಿ, ನನ್ಯಾರಾಂ ಜಾಧವ್, ಗಂಗಾರಾಂ ಜಾಧವ್, ರಘುವೀರ್ ಮತ್ತಿತರು ಸಜ್ಜೆಯ ಈ ಕೆಳಕಂಡ ಉಪಯೋಗಗಳನ್ನು ಕುರಿತು ಹೇಳಿದರು: ಸಜ್ಜೆಯನ್ನು ಬೆಟ್ಟದ ತಪ್ಪಲಲ್ಲಿ, ಮರುಭೂಮಿಯಲ್ಲಿ, ಸಮತಟ್ಟಾಗಿರದ ಪ್ರದೇಶಗಳಲ್ಲಿ, ಮಣ್ಣು ಫಲವತ್ತಾಗಿಲ್ಲದ ಕಡೆಗಳಲ್ಲಿ ಅತಿ ಕಡಿಮೆ ಮತ್ತು ಅನಿರ್ದಿಷ್ಟ ಮಳೆ ಬೀಳುವ ಪರಿಸ್ಥಿತಿಗಳಲ್ಲೂ (ರಾಜಸ್ಥಾನದಲ್ಲಿ ಇರುವಂತೆ) ಬೆಳೆಯಬಹುದು. ಏಕೆಂದರೆ ಇದು ಬರವನ್ನು ತಾಳಿಕೊಳ್ಳುವ ಬೆಳೆ. ಈ ಬೆಳೆಗೆ ರಾಸಾಯನಿಕ ಗೊಬ್ಬರಗಳಾಗಲಿ, ಕೀಟನಾಶಕಗಳಾಗಲಿ, ಹೈಬ್ರೀಡ್ ಬೀಜ ಇತ್ಯಾದಿಗಳ ಅವಶ್ಯಕತೆಯಿಲ್ಲ. ಇದನ್ನು ಮಿಶ್ರಬೆಳೆ ಪದ್ಧತಿಯಲ್ಲಿ ದ್ವಿದಳ ಧಾನ್ಯ ಮತ್ತು ಎಣ್ಣೆಕಾಳುಗಳ ಜೊತೆಯಲ್ಲೂ ಬೆಳೆಯಬಹುದು.

**ಕೋಷ್ಟಕ 1: ಆಹಾರ ಪದ್ಧತಿಗಳ ಬದಲಾವಣೆ**

| ಹಿಂದಿನ ಕಾಲದಲ್ಲಿ(ಸುಮಾರು 50–30 ವರ್ಷಗಳ ಹಿಂದೆ) | | ಪ್ರಸ್ತುತ(ಕಳೆದ 5–8 ವರ್ಷಗಳಿಂದ) | |
|---|---|---|---|
| ಕ್ರಮಾಂಕ | ಅಡುಗೆಗಳು | ಕ್ರಮಾಂಕ | ಬೆಳೆಗಳು/ ವಿಧಗಳು |
| 1 | ಮಜ್ಜಿಗೆ ಮತ್ತು ಸಜ್ಜೆ ಹಾಲಿನ ರಬ್ಡಿ ಮತ್ತು ಸಜ್ಜೆಯ ರಬ್ಡಿ | 1 | ಚಹಾ |
| 2 | ರೊಟ್ಟಿ –ಸಜ್ಜೆ | 2 | ಗೋಧಿ ರೊಟ್ಟಿ |
| 3 | ರೊಟ್ಟಿ – ಬೆಜಾಡ್ (ಕಾಳುಗಳು ಮತ್ತು ಬಾರ್ಲಿ) | 3 | ಚಳಿಗಾಲದಲ್ಲಿ ಮಾತ್ರ ಸಜ್ಜೆಯ ರೊಟ್ಟಿ |
| 4 | ರೊಟ್ಟಿ – ತೀನಾಜ್ (ಕಾಳು, ಬಾರ್ಲಿ ಮತ್ತು ಗೋಧಿ) | 4 | ದಾಲ್ ಚಾವಲ್ |
| 5 | ಕಾಳು, ಹೆಸರು, ಉದ್ದು ಹಾಕಿ ಮಾಡಿದ ಸಬ್ಜಿ | 5 | ತರಕಾರಿಗಳಾದ ಬೂದುಗುಂಬಳ, ಈರುಳ್ಳಿ, ಹೂಕೋಸು, ಸೋರೆಕಾಯಿ |
| 6 | ಹಿಟ್ಟಿನ ಕಡಿ | 6 | ದಾಲ್ – ಬಟ್ಟಿ – ಚುರುಂ |
| 7 | ಪಿತೋಡ್ (ಮಜ್ಜಿಗೆ ಮತ್ತು ಕಡಲೆಹಿಟ್ಟು) | 7 | |
| 8 | ಪಿತೋಡ್ (ಮಜ್ಜಿಗೆ ಮತ್ತು ಕಡಲೆಹಿಟ್ಟು) | 8 | |
| 9 | ಚನ್ನಾ ಮಾಂಗೋಡಿ ಬೆಸನ್ ಗಾಟ್ಟಾ | 9 | |
| 10 | ಸಜ್ಜೆಯ ಕಿಚಡಿ | | |
| 11 | ಸಜ್ಜೆ ಕಿಚಡಿ | | |

**ಬಾಕ್ಸ್ 1 : ಸ್ಥಳೀಯ ಸಂಸ್ಕೃತಿಗಳಲ್ಲಿ ಸಜ್ಜೆಯ ಹಲವು ಉಪಯೋಗಗಳು**

ರಾಜಸ್ಥಾನದಲ್ಲಿ 'ಗೋವರ್ಧನ' ಹಬ್ಬದ ಸಂಜೆ (ದೀಪಾವಳಿಯ ಎರಡನೆಯ ದಿನ) 'ಅನ್ನಾಕುಟ್'ನ್ನು ಆಚರಿಸಲಾಗುತ್ತದೆ. ಅಂದು ಇಡೀ ಸಮುದಾಯ ಒಟ್ಟಾಗಿ 'ಖಿಚಿಬಾಜ್ರಾ' ಎನ್ನುವ ಸಜ್ಜೆಯ ವಿಶೇಷ ಖಾದ್ಯವನ್ನು ಮಾಡಿ ಸವಿಯುತ್ತಾರೆ. 'ಮಕರ ಸಂಕ್ರಾಂತಿ'ಯಂದು ಸಜ್ಜೆಯನ್ನು ನೀಡುವ ಸಂಪ್ರದಾಯವಿದೆ. ಅಂದು ಎಳ್ಳನ್ನು ಮಿಶ್ರಮಾಡಿ ಚಪಾತಿಗಳನ್ನು ಮಾಡುವುದು ಶ್ರೇಷ್ಠವೂ, ಮಂಗಳಕರವೂ ಎಂದು ಭಾವಿಸಲಾಗುತ್ತದೆ. ಮಹಾಶಿವರಾತ್ರಿಯಂದು 'ಚೋಲೆ ಕೆ ಲಡ್ಡು' ಎಂಬ ತಿನಿಸನ್ನು (ಕಿರುಧಾನ್ಯಗಳನ್ನು ಬಳಸಿ) ಮಾಡುತ್ತಾರೆ. 'ಬಾದ್ವುವ' ಅಂದರೆ ಹತ್ತು ಧಾನ್ಯಗಳಾದ ಸಜ್ಜೆ, ಮೆಕ್ಕೆಜೋಳ, ಜೋಳ, ಕಡಲೆ, ಎಳ್ಳು, ಅಕ್ಕಿ, ಗೋಧಿ, ಬಾರ್ಲಿ, ಅಲಸಂದೆ, ಹೆಸರುಬೇಳೆ ಇವುಗಳನ್ನು ಮಡಿಕೆಯಲ್ಲಿ ತುಂಬಿ ದಸರಾ ಹಬ್ಬದಲ್ಲಿ ಪೂಜೆಗಾಗಿ ಬಳಸುತ್ತಾರೆ. ಶುಭ ಸಂದರ್ಭಗಳಲ್ಲಿ ಕಲಶವನ್ನು ಇಟ್ಟು 'ಕಲಶ ಪೂಜೆ' ಮಾಡುವಾಗ ಅದರ ಕೆಳಗೆ ಸಜ್ಜೆಯ ಕಾಳುಗಳನ್ನು ಹಾಕುತ್ತಾರೆ.

ಮದುವೆಯ ಮರುದಿನ ವಧುವರರು ಪರಸ್ಪರರ ಮೇಲೆ ಸಜ್ಜೆಯ ಬೀಜಗಳನ್ನು ಎರಚಿಕೊಳ್ಳುವ 'ಕಂಗಾ ಖೇಲನ' ಎನ್ನುವ ಸಂಪ್ರದಾಯವಿದೆ. ಮತ್ತೊಂದು ಸಂಪ್ರದಾಯ 'ದುಂದ್'. ಮನೆಯಲ್ಲಿ ಮಗು ಹುಟ್ಟಿದಾಗ ಆ ವರ್ಷ ಹೋಳಿ ಹಬ್ಬದಂದು ಸಜ್ಜೆಯ ಪಾಯಸ ಮಾಡಿ ಅಕ್ಕಪಕ್ಕದವರಿಗೆ ಹಂಚುತ್ತಾರೆ.

ಹಕ್ಕಿಗಳಿಗೆ ಸೂಕ್ತ ಆವಾಸಸ್ಥಾನವಾಗಿಸುವ ಸಲುವಾಗಿ ಅವುಗಳಿಗೆ ಪ್ರತಿದಿನ ಸಜ್ಜೆಯಿಂದ ಮಾಡಿದ ತಿನಿಸನ್ನು ಉಣಿಸುವ 'ಚುಗಾ ಡಾಲ್ನಾ' ಎನ್ನುವ ಸಂಪ್ರದಾಯವಿದೆ. ತೋಪುಗಳಲ್ಲಿ ಮತ್ತು ದೇವಾಲಯದ ಆವರಣಗಳಲ್ಲಿ ಇದನ್ನು ಕಾಣಬಹುದು. ಅದೇ ರೀತಿ ಇರುವೆಗಳಿಗೆ ಸಿರಿಧಾನ್ಯಗಳನ್ನು ಉಣಿಸುವ 'ಚೀತ್ವಾಲ್' ಎನ್ನುವ ಸಂಪ್ರದಾಯವಿದೆ.



*ಸಾಂಪ್ರದಾಯಿಕ ಬೆಳೆ ಪದ್ಧತಿಗಳ ಬಗ್ಗೆ ತಿಳಿಯಲು ಮಹಿಳಾ ರೈತರೊಂದಿಗೆ ನಡೆಸಿದ ಸಂವಾದ.*

ಇದು ಹೆಚ್ಚು ಪೌಷ್ಟಿಕತೆಯನ್ನು ಹೊಂದಿದ್ದು ರುಚಿಯಾಗಿರುತ್ತದೆ. ಜೊತೆಗೆ ಚಳಿಗಾಲದಲ್ಲಿ ಅಗತ್ಯವಾದ ಶಾಖ, ಶಕ್ತಿ ಮತ್ತು ಸಾಮರ್ಥ್ಯಗಳನ್ನು ಒದಗಿಸುತ್ತದೆ. ಕಡಿಮೆ ಬೆಲೆಗೆ ಸಿಗುವುದರಿಂದ ಹಳ್ಳಿಯ ಬಡವರು ಕೂಡ ಇದನ್ನು ಕೊಳ್ಳಬಹುದು. ಸಜ್ಜೆ ಜಾನುವಾರುಗಳಿಗೆ ಒಳ್ಳೆಯ ಮೇವನ್ನು ಸಹ ಒದಗಿಸುತ್ತದೆ (ಹಸಿಹುಲ್ಲು ಹಾಗೂ ಒಣಹುಲ್ಲು – ಕಾಡ್ಬಿ). ಸಜ್ಜೆಯನ್ನು ಜಾನುವಾರಗಳ ಕಾಯಿಲೆಗಳಿಗೆ ಔಷಧಿಯಾಗಿಯೂ ಬಳಸುತ್ತಾರೆ. ಸಜ್ಜೆ ಸ್ಥಳೀಯ ಸಂಸ್ಕೃತಿಯ ಭಾಗವಾಗಿದೆ (ನೋಡಿ ಬಾಕ್ಸ್ 1).

ಕೆರ್ವಾವಾಲ ಹಳ್ಳಿಯ ರೈತರು ತಮ್ಮ ತಂದೆತಾಯಿಗಳು ಮಿಶ್ರಬೆಳೆ ಪದ್ಧತಿಯನ್ನು ಅನುಸರಿಸುತ್ತಿದ್ದುದನ್ನು ನೆನಪಿಸಿಕೊಂಡರು. ಸಜ್ಜೆಯನ್ನು ದ್ವಿದಳ ಧಾನ್ಯಗಳೊಂದಿಗೆ (ಉದಾ: ಉದ್ದು ಮತ್ತು ಹೆಸರು) ಮತ್ತು ಎಣ್ಣೆ ಕಾಳುಗಳೊಂದಿಗೆ (ಉದಾ: ಎಳ್ಳು), ತಿನ್ವಾ (ಮೂರು ಕಾಳುಗಳು – ಬಾರ್ಲಿ, ಕಡಲೆ, ಗೋಧಿ), ಗೌಚಾನಿ (ಬಾರ್ಲಿ, ಗೋಧಿ), ಬೇಜಾಡ್ (ಬಾರ್ಲಿ, ಕಡಲೆ), ಏಳು ಧಾನ್ಯಗಳು – ಸಜ್ಜೆ, ಮೆಕ್ಕೆಜೋಳ,ಸಾಸಿವೆ, ಗೋಧಿ, ಜೋಳ, ತೊಗರಿ ಮತ್ತು ಬಾರ್ಲಿ – ಬೆಳೆಯಬಹುದಾದ ಸಾಧ್ಯತೆಗಳನ್ನು ನೆನಪಿಸಿಕೊಂಡರು. ಸಾಂಪ್ರದಾಯಿಕ ಸಜ್ಜೆ ಮತ್ತು ಸಿರಿಧಾನ್ಯಗಳ ಮಿಶ್ರಬೆಳೆ ಪದ್ಧತಿ ಜೈವಿಕವೈವಿಧ್ಯತೆಯನ್ನು ಒಳಗೊಂಡಿದೆ ಎಂಬ ಅಂಶ ಅವರಿಗೆ ಮನವರಿಕೆಯಾಯಿತು.

ರೈತರಿಗೆ ಈ ಪದ್ಧತಿಯ ಪ್ರಾಮುಖ್ಯತೆ ಅರಿವಾಗುತ್ತಿದ್ದಂತೆ KRAPAVIS ಮಾಡಿದ ಮೊದಲ ಕೆಲಸವೆಂದರೆ: 1) ಸಾಂಪ್ರದಾಯಿಕ ಮಿಶ್ರಬೆಳೆ ಪದ್ಧತಿಗಳನ್ನು ಗುರುತಿಸಿದ್ದು; 2) ಸಜ್ಜೆಯೊಂದಿಗೆ ಮಿಶ್ರಬೆಳೆ ಕೃಷಿಯನ್ನು ಮಾಡಲು ಆಸಕ್ತವಾಗಿರುವ ರೈತರನ್ನು ಗುರುತಿಸಿದ್ದು. ಇಲ್ಲಿ ಸಾಂಪ್ರದಾಯಿಕ ಕೃಷಿ ವಿಧಾನಗಳಾದ ಮಿಶ್ರಸಿರಿಧಾನ್ಯ ಆಧಾರಿತ ಬೆಳೆಪದ್ಧತಿ, ಎರೆಹುಳಗೊಬ್ಬರ ಮತ್ತು ಜೈವಿಕ ಗೊಬ್ಬರ ಬಳಕೆ ಇತ್ಯಾದಿಗಳನ್ನು ಅನುಸರಿಸಲು ಶ್ರಮಿಸುತ್ತಿರುವ ರೈತರನ್ನು ಗುರುತಿಸಲಾಯಿತು.

ರೈತರ ನಡುವೆ ಮತ್ತು ರೈತ ಸಮುದಾಯಗಳ ನಡುವೆ ವಿಚಾರ ವಿನಿಮಯವನ್ನು ಸಾಧ್ಯವಾಗಿಸುವ ಸಲುವಾಗಿ ಪರಸ್ಪರ ಭೇಟಿಯ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು. ದಂತ ರಾಮಗರ್‌ನ ಸುಂಡರಾಮ್ ವರ್ಮಾ ಎನ್ನುವ ವಿದ್ಯಾವಂತ ರೈತನೊಂದಿಗೆ ಇದೇ ಆಶಯದೊಂದಿಗೆ ಭೇಟಿ ಹಾಗೂ ಚರ್ಚೆಯನ್ನು ಆಯೋಜಿಸಲಾಯಿತು. ಈತ ಹೊಸ ವಿಧಾನಗಳ ಕುರಿತು ಮತ್ತು ಬರ, ಹಿಮಪಾತ, ಕೀಟ ಮತ್ತು ರೋಗ ಇವುಗಳನ್ನು ತಾಳಿಕೊಳ್ಳಬಲ್ಲ ವಿವಿಧ ಬೆಳೆಗಳನ್ನು ಬೆಳೆಯಬಹುದಾದ ವಿಧಾನಗಳನ್ನು ಅನ್ವೇಷಿಸಲು ಪ್ರಯತ್ನಿಸುತ್ತಿದ್ದಾರೆ.

KRAPAVIS ಸಜ್ಜೆಯ ಸಾಂಪ್ರದಾಯಿಕ ಬೀಜಗಳನ್ನು ಸಂರಕ್ಷಿಸಲು ಮತ್ತು ಸಜ್ಜೆಯಾಧಾರಿತ ಕೃಷಿಪದ್ಧತಿಯನ್ನು ಮರಳಿ ತರುವ ನಿಟ್ಟಿನಲ್ಲಿ ರೈತರನ್ನು ಪ್ರೋತ್ಸಾಹಿಸಿತು. ಹಳ್ಳಿಗರು ಬಹುತೇಕ ಸಾಂಪ್ರದಾಯಿಕ ಬೀಜಗಳನ್ನು ಕಳೆದುಕೊಂಡುಬಿಟ್ಟಿದ್ದರು. ಆಗ KRAPAVIS ಸ್ಥಳೀಯ ಸಜ್ಜೆ ಮತ್ತು ಜೋಳದ ಬೀಜಗಳನ್ನು ಸಂಗ್ರಹಿಸಲು, ವಿನಿಮಯ ಮಾಡಿಕೊಳ್ಳಲು ಮತ್ತು ಸಂರಕ್ಷಿಸಿಕೊಳ್ಳಲು ಅನುಕೂಲಗಳನ್ನು ಮಾಡಿಕೊಟ್ಟಿತು.

ಸಾಂಪ್ರದಾಯಿಕ ಸಜ್ಜೆಯ ಬೀಜವನ್ನು ವಿತರಿಸಿದ ನಂತರ ಏಳು ಧಾನ್ಯಗಳ ಮಿಶ್ರಬೆಳೆ ಪದ್ಧತಿ ವಿಧಾನದ ಪ್ರಾತ್ಯಕ್ಷಿಕೆಯನ್ನು ಆಯೋಜಿಸಲಾಯಿತು (ಏಳು ಧಾನ್ಯಗಳು – ಸಜ್ಜೆ, ಮೆಕ್ಕೆಜೋಳ, ಸಾಸಿವೆ, ಗೋಧಿ, ಜೋಳ, ತೊಗರಿಬೇಳೆ ಮತ್ತು ಬಾರ್ಲಿ).

ಇದರೊಂದಿಗೆ ಹಳ್ಳಿಗಳಲ್ಲಿ ಮಹಿಳಾ ಮಂಡಳಿ ಎಂಬ ಹೆಸರಿನಲ್ಲಿ ಹೆಣ್ಣುಮಕ್ಕಳ ಗುಂಪನ್ನು ರಚಿಸಲಾಯಿತು. ಈ ಗುಂಪು ಪ್ರತಿ ತಿಂಗಳು ಸಭೆ ಸೇರುವುದಲ್ಲದೇ ಉಳಿತಾಯವನ್ನು ಕೂಡ ಮಾಡುತ್ತಿದೆ. ಅಲ್ಲದೇ ಗುಂಪಿನ ಸದಸ್ಯರು ಪ್ರತಿಯೊಂದಕ್ಕೂ ಲೆಕ್ಕಪತ್ರಗಳನ್ನು ಇಟ್ಟಿದ್ದು ಆರ್ಥಿಕ ಚಟುವಟಿಕೆಗಳನ್ನು ಸ್ವತಃ ತಾವೇ ನಿರ್ವಹಿಸುತ್ತಿದ್ದಾರೆ. ಇಲ್ಲಿನ ಮಹಿಳಾ ಸದಸ್ಯರನ್ನು ವಿನಿಮಯ ಭೇಟಿಗೆ ಕರೆದೊಯ್ದಾಗ ಅವರು ಕೂಡಾ ಹಲವು ವಿಧದ ಬೀಜಗಳನ್ನು ನೋಡಿದರು. ಸಾಂಪ್ರದಾಯಿಕ ಬೀಜಗಳು ಎಲ್ಲರಿಗೂ ಲಭ್ಯವಾಗುವಂತೆ ಮಾಡಲು ಬೀಜಬ್ಯಾಂಕುಗಳನ್ನು ತೆರೆಯಲಾಯಿತು. ಮಹಿಳಾ ಮಂಡಳಿಗಳು ಬೀಜಗಳನ್ನು ಸಂಗ್ರಹಿಸಿದ್ದಲ್ಲದೇ ಅವುಗಳನ್ನು ಅವರದೇ ಗುಂಪಿನ ಸದಸ್ಯರಿಗೆ ಮತ್ತು ಹೊರಗಿನವರಿಗೆ ನೀಡಲಾರಂಭಿಸಿದವು. ಬೀಜಗಳನ್ನು ತೆಗೆದುಕೊಂಡ ಪ್ರತಿಯೊಬ್ಬ ಸದಸ್ಯರು ತಾವು ತೆಗೆದುಕೊಂಡ ಬೀಜಗಳೊಂದಿಗೆ

**ಸಜ್ಜೆಯೊಂದಿಗಿನ ಮಿಶ್ರಬೆಳೆ ಪದ್ಧತಿಯಿಂದಾಗಿ ಕೆರ್ವಾವಾಲ್ ಹಳ್ಳಿಯ 1300 ಎಮ್ಮೆಗಳು, 7000 ಮೇಕೆಗಳು, 50 ಹಸುಗಳು, 300 ಕುರಿಗಳು ಮತ್ತು 50 ಕುದುರೆಗಳಿಗೆ ಮೇವಿನ ಭದ್ರತೆ ಸಿಕ್ಕಂತಾಗಿದೆ.**

ಇನ್ನೂ ಸ್ವಲ್ಪ ಬೀಜಗಳನ್ನು ಸೇರಿಸಿ ಬ್ಯಾಂಕಿಗೆ ಹಿಂತಿರುಗಿಸುತ್ತಾರೆ. ಇದರಿಂದ ಬೀಜಬ್ಯಾಂಕಿನ ಸಂಗ್ರಹಣೆ ದ್ವಿಗುಣಗೊಳ್ಳುತ್ತದೆ. ಬೀಜಗಳು ಯಾವುದೇ ರೀತಿಯ ಕೀಟಗಳಿಂದ ಹಾನಿಗೊಳಗಾಗದೇ ಸುರಕ್ಷಿತವಾಗಿ ಇಟ್ಟುಕೊಳ್ಳಲು ನೆರವಾಗುವಂತೆ KRAPAVIS ಈ ಗುಂಪುಗಳಿಗೆ ಸ್ಟೀಲ್ ಪೆಟ್ಟಿಗೆಗಳನ್ನು ಒದಗಿಸಿದೆ. ಬೀಜಬ್ಯಾಂಕಿನ ಕಾರಣದಿಂದಾಗಿ ಮಹಿಳೆಯರು ಸಾಂಪ್ರದಾಯಿಕ ಬೀಜಗಳನ್ನು ಸಂರಕ್ಷಿಸಿಟ್ಟುಕೊಳ್ಳುವುದಲ್ಲದೆ, ಹೈಬ್ರೀಡ್ ಬೀಜಗಳನ್ನು ಅವಲಂಬಿಸುವುದು ಕಡಿಮೆಯಾಗಿದೆ. ಇದರಿಂದ ದುಬಾರಿ ಹೈಬ್ರೀಡ್ ಬೀಜಗಳಿಗಾಗಿ ಮಾಡುತ್ತಿದ್ದ ವೆಚ್ಚದಲ್ಲಿ ಕೂಡಾ ಇಳಿಕೆಯಾಗಿದೆ.

ಸಾಧಾರಣ ನೀರು ಸಂಗ್ರಹಣೆ ಮತ್ತು ಸಾಂಪ್ರದಾಯಿಕ ನೀರು ಸಂಗ್ರಹಣಾ ವ್ಯವಸ್ಥೆಯ ಕುರಿತು ಕೆಲವು ಪ್ರಾತ್ಯಕ್ಷಿಕೆಗಳನ್ನು ನಡೆಸಲಾಯಿತು. ಕೆರೆ, ಬಾವಿಗಳ ಹೂಳೆತ್ತುವುದು, ಅವುಗಳ ಆಳವನ್ನು ಹೆಚ್ಚಿಸುವುದು ಹಾಗೂ ನೀರನ್ನು ಅಲ್ಲಿ ಸಂಗ್ರಹಿಸುವ ಮೂಲಕ ಅಂತರ್ಜಲ ಮಟ್ಟವನ್ನು ಹೆಚ್ಚಿಸುವುದು, ಜಾನುವಾರುಗಳಿಗೆ ಹಾಗೂ ಮನೆಬಳಕೆಗೆ ನೀರು ಸಿಗುವಂತೆ ಮಾಡುವ ಮೂಲಕ ಪರಿಸ್ಥಿತಿಗಳನ್ನು ಸುಧಾರಿಸುವ ಕುರಿತು ಪ್ರಾತ್ಯಕ್ಷಿಕೆಯಲ್ಲಿ ತೋರಿಸಲಾಯಿತು.

ದೇಶದ ಅತಿದೊಡ್ಡ ಸಂಪರ್ಕಜಾಲ MINI (Millet Network of India)ಯ ಸದಸ್ಯನಾಗಿ ಸಿರಿಧಾನ್ಯಗಳಿಗೆ ಅನುಕೂಲವಾಗುವಂತಹ ನೀತಿಯನ್ನು ರೂಪಿಸಲು ಅದರ ಪರವಾಗಿ ವಕಾಲತ್ತು ವಹಿಸುವ ನಿಟ್ಟಿನಲ್ಲಿಯೂ ಶ್ರಮಿಸುತ್ತಿದೆ. ಸಿರಿಧಾನ್ಯಗಳ ಈ ಪ್ರಚಾರಾಂದೋಲನದಲ್ಲಿ ನಾವು ಹಲವಾರು ವಿಜ್ಞಾನಿಗಳು, ವೈದ್ಯರು, ರೈತ ಸಂಘಟನೆಗಳು ಮತ್ತು ಗ್ರಾಹಕ ಸಂಘಟನೆಗಳನ್ನು ಜೊತೆಗೂಡಿಸಿಕೊಂಡಿದ್ದೇವೆ. ಇತರೆ ಸಂಘಟನೆಗಳಿಂದ ಮತ್ತು ರಾಜಸ್ಥಾನದಿಂದ ಸಿರಿಧಾನ್ಯ ಪ್ರಚಾರಾಂದೋಲನ ಬೆಂಬಲಿಸಿದ ಗುಂಪುಗಳಿಂದ 92 ಪತ್ರಗಳನ್ನು (ಸಂಸದರು, ಪಂಚಾಯ್ತಿ ಮುಖಂಡರು, ವೈದ್ಯರು, ವಿಜ್ಞಾನಿಗಳು, ಗ್ರಾಮದ ಮುಖ್ಯಸ್ಥರು, ಶೈಕ್ಷಣಿಕತಜ್ಞರು ಮೊದಲಾದವರು) ಸಂಗ್ರಹಿಸಿ ಕೃಷಿ ಸಚಿವರು ಮತ್ತು ಮುಖ್ಯಮಂತ್ರಿಗಳಿಗೆ ಕಳುಹಿಸಿರುವುದಲ್ಲದೇ ಮಾಧ್ಯಮಗಳಲ್ಲಿಯೂ ಇದನ್ನು ಬಿಡುಗಡೆ ಮಾಡಲಾಗಿದೆ.

ಗ್ರಾಮೀಣ ಭಾಗದಲ್ಲಿನ ಪಶುಸಂಗೋಪನ ಸಮುದಾಯಗಳು 'ಅರಣ್ಯದ ಉಪ ಉತ್ಪನ್ನಗಳು,ಜಾನುವಾರು, ಕೃಷಿ' ಇವುಗಳನ್ನು ಆಧರಿಸಿ ಬದುಕುತ್ತಿರುತ್ತಾರೆ. ಅವರು ಸುಸ್ಥಿರ ಬದುಕು ನಡೆಸಲು ನೆರವಾಗಲು MINOR (Millet Network of Rajasthan) ಎನ್ನುವ ಗುಂಪನ್ನು ರಚಿಸಲಾಗಿದೆ. ಸುಸ್ಥಿರ ಕೃಷಿ, ಸಾಂಪ್ರದಾಯಿಕ ಮಿಶ್ರಬೆಳೆ ಪದ್ಧತಿ, ಸಾಂಪ್ರದಾಯಿಕ ಬೀಜಗಳು ಅದರಲ್ಲೂ ಸಾಸಿವೆ, ಕಾಳುಗಳು, ತೊಗರಿ ಮತ್ತು ಸಜ್ಜೆ ಇವುಗಳನ್ನು ಕುರಿತು KRAPAVIS ಪ್ರಚಾರ ನಡೆಸುವುದನ್ನು ಮುಂದುವರೆಸಿದೆ. ನಮ್ಮ ಸಂಪರ್ಕಜಾಲದ ಮೂಲಕ ಸ್ಥಳೀಯ ಸಜ್ಜೆ ಮತ್ತು ಇನ್ನಿತರ ಬೆಳೆಗಳ ಬೀಜಗಳನ್ನು ತನ್ನ ಕೃಷಿ ಸಂಸ್ಥೆಗಳ ಮೂಲಕ ವಿತರಿಸುವಂತೆ ನಾವು ಸರ್ಕಾರವನ್ನು ವಿನಂತಿಸಿಕೊಂಡಿದ್ದೇವೆ; ಸರ್ಕಾರದ ಮೇವು ಬ್ಯಾಂಕುಗಳಲ್ಲಿ ಸಜ್ಜೆಯ ಹೊಟ್ಟು ಅಥವಾ ತೌಡನ್ನು ಸ್ವೀಕರಿಸಿ, ಸಂಗ್ರಹಿಸಿಟ್ಟುಕೊಂಡು ಬರದ ಸಮಯದಲ್ಲಿ ಅದನ್ನು ಪೂರೈಸುವಂತೆ, ಪಡಿತರ ಚೀಟಿ ಅಂಗಡಿಗಳಲ್ಲಿ ಸಜ್ಜೆಯನ್ನು ವಿತರಿಸುವಂತೆ, ಅಂಗನವಾಡಿ ಮತ್ತು ಮಧ್ಯಾಹ್ನದ ಬಿಸಿಯೂಟ ಯೋಜನೆಗಳಲ್ಲಿ ಸಜ್ಜೆಯನ್ನು ಸೇರಿಸಿಕೊಳ್ಳುವಂತೆ, ಗ್ರಾಮಗಳ ಮಟ್ಟದಲ್ಲಿ ಸಮುದಾಯಗಳೇ ನಿರ್ವಹಿಸುವಂತಹ ಗೋದಾಮುಗಳನ್ನು ನಿರ್ಮಿಸುವಂತೆ ಸರ್ಕಾರವನ್ನು ನಾವು ಒತ್ತಾಯಿಸಿದ್ದೇವೆ.

## ಪ್ರಮುಖ ಫಲಿತಾಂಶಗಳು

ಸಾಂಪ್ರದಾಯಿಕ ಸಿರಿಧಾನ್ಯಗಳನ್ನಾಧರಿಸಿದ ಮಿಶ್ರಬೆಳೆಯ ಪದ್ಧತಿಯನ್ನು ಕೇರ್ವಾಲ್ ಪಂಚಾಯ್ತಿ ಹಾಗೂ ಸುತ್ತಲಿನ ಹಳ್ಳಿಗಳಲ್ಲೂ ಕೂಡ ರೈತರು ಅಳವಡಿಸಿಕೊಳ್ಳಲು ಒಪ್ಪಿಕೊಂಡಿದ್ದಾರೆ. ಕೇರ್ವಾಲ್ ಮತ್ತು ಸುತ್ತಲ 14 ಹಳ್ಳಿಗಳಲ್ಲಿ ರೈತರು ಸ್ಥಳೀಯ ಬೀಜಗಳು ಮತ್ತು ಸಜ್ಜೆಸಹಿತ ಮಿಶ್ರಬೆಳೆಯನ್ನು ಅತಿಕಡಿಮೆ ಬಾಹ್ಯ ಪರಿಕರಗಳನ್ನು ಬಳಸಿಕೊಂಡು ಬೆಳೆಯುತ್ತಿರುವುದು



*ರೈತರು ಕೇರ್ವಾಲ್‌ನಲ್ಲಿ ಸಜ್ಜೆ ಆಧಾರಿತ ಬೆಳೆಪದ್ಧತಿಯನ್ನು ಅನುಸರಿಸಲು ಯತ್ನಿಸುತ್ತಿದ್ದಾರೆ*

ಇದಕ್ಕೆ ಸಾಕ್ಷಿ. ಇಂದು ಸುಮಾರು 177 ರೈತರು ಸ್ಥಳೀಯ ಬೀಜಪದ್ಧತಿಯ ಬಳಕೆಯ ಸುಸ್ಥಿರ ಕೃಷಿ ವಿಧಾನವನ್ನು ಅನುಸರಿಸುತ್ತಿದ್ದಾರೆ. ಇದರಿಂದ ಉತ್ಪಾದನೆಯಲ್ಲಿ ಹಾಗೂ ಕೃಷಿಯ ಸುಸ್ಥಿರತೆಯಲ್ಲೂ ಸುಧಾರಣೆ ಕಂಡಿದೆ.

ಕೇರ್ವಾಲ್ ಹಳ್ಳಿಯಲ್ಲಿ ಸಜ್ಜೆಸಹಿತ ಮಿಶ್ರಬೆಳೆ ಪದ್ಧತಿಯಿಂದಾಗಿ 1300 ಎಮ್ಮೆಗಳು, 7000 ಮೇಕೆಗಳು, 50 ಹಸುಗಳು, 300 ಕುರಿಗಳು ಮತ್ತು 50 ಕುದುರೆಗಳಿಗೆ ಮೇವಿನ ಭದ್ರತೆ ಸಿಕ್ಕಂತಾಗಿದೆ.

ಹಳ್ಳಿಗರಲ್ಲಿ ದೇಶೀ ಬೀಜಸಂರಕ್ಷಣೆಯ ಕುರಿತು ಅರಿವು ಹೆಚ್ಚಾಗಿದೆ ಮಾತ್ರವಲ್ಲ ಈ ಕುರಿತು ಪರಿಣಾಮಕಾರಿ ಪ್ರಚಾರ ನೀಡುವ ಸಲುವಾಗಿ 'ದೇವಬನಿ ರೆ ಬಾತ್' ಎನ್ನುವ ತ್ರೈಮಾಸಿಕ ಸುದ್ದಿಪತ್ರದ ಏಳು ಸಂಚಿಕೆಗಳನ್ನು ಹೊರತರಲಾಗಿದೆ. ಸ್ವ-ಸಹಾಯ ಸಂಘಗಳ ಮೂಲಕ 'ಬೀಜ ಬ್ಯಾಂಕು'ಗಳಲ್ಲಿ ಸಾಂಪ್ರದಾಯಿಕ ಬೀಜಗಳನ್ನು ಉಳಿತಾಯ ಮಾಡುವ ಪರಿಕಲ್ಪನೆಯು ಕಾಲಿಖೋಲ್, ಬಂಧೆ ಕಾ ಬಾಸ್, ಕಾಗ್ವುರ್ ಮತ್ತು ಭಕ್ತಪುರ ಎಂಬ ನಾಲ್ಕು ಪಂಚಾಯಿತಿಗಳಲ್ಲಿ/ಹಳ್ಳಿಗಳಲ್ಲಿ ಹರಡಿದೆ. ಸುಮಾರು 20 ಹಳ್ಳಿಗಳಲ್ಲಿನ ರೈತರ ನಡುವೆ ಸಂಪರ್ಕಜಾಲ ಬೆಸೆಯುವ ಮೂಲಕ ಬೀಜಗಳ ವಿನಿಮಯಕ್ಕೆ ಅನುಕೂಲ ಕಲ್ಪಿಸಲಾಗಿದೆ.

ಸ್ವತಃ Millet Network of Rajasthan (MINOR) ಹಾಗೂ ಇನ್ನಿತರ ಪ್ರಭಾವೀ ಸಂಪರ್ಕಜಾಲಗಳಾದ MINIಯಂತಹವುಗಳೊಂದಿಗೆ ಸೇರಿ ಸ್ಥಳೀಯ ಕೃಷಿ ಇಲಾಖೆ, ರಾಜಕಾರಣಿಗಳು, ಸ್ವಯಂಸೇವಾ ಸಂಘಸಂಸ್ಥೆಗಳು ಮತ್ತು ಯೋಜನೆಗಳನ್ನು ರೂಪಿಸುವವರೊಂದಿಗೆ ಸದಾ ಸಂವಾದ ನಡೆಸುತ್ತಲಿದೆ. ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ನು ಜಾರಿಗೊಳಿಸುವಲ್ಲಿ ಈ ಸಂಸ್ಥೆಯ ಶ್ರಮ ಮತ್ತು ಕೊಡುಗೆ ಅಪಾರ. ಇದೇ ರೀತಿಯ ನಿರಂತರ ಪ್ರಯತ್ನದ ಫಲವಾಗಿ ಸರ್ಕಾರವು ಈಗ ಸಜ್ಜೆಯನ್ನು ಬೆಳೆಯುವ ರೈತರಿಗೆ ಕನಿಷ್ಠ ಬೆಂಬಲ ಬೆಲೆಯನ್ನು ನೀಡುವ ಮೂಲಕ ಸಹಕಾರ ಒದಗಿಸಲು ಮುಂದಾಗಿದೆ. ■

**Aman Singh and Pratibha Sisodia**
Krishi Avam Paristhitiki Vikas Sansthan (KRAPAVIS)
KRAPAVIS Training Centre
Prachin Bhurasidh, P.O. Kala Kua
Alwar – 301001, Rajasthan, India
E-mail: krapavis_oran@rediffmail.com

**ಆಂಗ್ಲ ಮೂಲ**
ಲೀಸಾ ಇಂಡಿಯಾ, ಸಂಪುಟ 19, ಸಂಚಿಕೆ 4, ಡಿಸೆಂಬರ್ 2017

# ಇವರೇ ನೋಡಿ ಸಿರಿಧಾನ್ಯಗಳ ಸಿರಿವಂತ

■ ಅಮಿತ್ ಚಕ್ರವರ್ತಿ

**ಸಿರಿಧಾನ್ಯಗಳ ಬಗ್ಗೆ ಗ್ರಾಹಕರಿಗೆ ಹೆಚ್ಚಿನ ಅರಿವಿಲ್ಲ. ಇವುಗಳಿಗೆ ಬೇಡಿಕೆ ಕಡಿಮೆ, ಲಾಭವೂ ಕಡಿಮೆ. ಸಂಶೋಧನಾ ಸಂಸ್ಥೆಗಳಿಗೆ ಹಾಗೂ ವಾಣಿಜ್ಯ ಸಂಸ್ಥೆಗಳಿಗೆ ಕೂಡಾ ಇವುಗಳ ಬಗೆಗಿನ ಆಸಕ್ತಿ ವಿರಳವೆಂದೇ ಹೇಳಬಹುದು. ಸಿರಿಧಾನ್ಯಗಳಲ್ಲಿ ಹೆಚ್ಚಿನ ಪೌಷ್ಟಿಕಾಂಶಗಳಿವೆ, ಪ್ರತಿಕೂಲ ಹವಾಮಾನ ಪರಿಸ್ಥಿತಿಯಲ್ಲಿ ಕೂಡ ರೈತರು ಇವುಗಳನ್ನು ಬೆಳೆಯಬಹುದು. ಇಷ್ಟೆಲ್ಲ ಅನುಕೂಲಗಳಿದ್ದರೂ ಇವುಗಳ ಬಗ್ಗೆ ಆಸಕ್ತಿಯಿಲ್ಲದಿರುವುದು ಅಚ್ಚರಿಯ ಸಂಗತಿ. ಇವು ಪರಿಸರಕ್ಕೆ ಹಾನಿಯುಂಟುಮಾಡುವುದಿಲ್ಲ. ಇವುಗಳನ್ನು ಬೆಳೆಯಲು ಬೇಕಾಗುವ ನೀರಿನ ಪ್ರಮಾಣ ಅತ್ಯಲ್ಪ, ಯಾವುದೇ ರೀತಿಯ ಗೊಬ್ಬರ, ಕೀಟನಾಶಕಗಳ ಅಗತ್ಯವಿಲ್ಲ. ರೈತರು ಸಿರಿಧಾನ್ಯಗಳನ್ನು ಜನಪ್ರಿಯಗೊಳಿಸಲು ಅಡ್ಡಿಯಾಗಿರುವ ಸಂಗತಿಗಳನ್ನು ನಿವಾರಿಸಿಕೊಳ್ಳುವ ಮೂಲಕ ಹೊಸ ಅಲೆಯೊಂದನ್ನು ಹುಟ್ಟುಹಾಕಿದ್ದಾರೆ.**

ನಾವು ತೋಟದೊಳಗೆ ನಡೆದುಹೋಗುತ್ತಿದ್ದಂತೆ ಇನ್ನೂ ನಿರ್ಮಾಣ ಹಂತದಲ್ಲಿದ್ದ ಶೆಡ್‌ಕಣ್ಣಿಗೆ ಬಿತ್ತು. "ಈ ಸುತ್ತಲ ಹಳ್ಳಿಗಳಲ್ಲಿನ ಕನಿಷ್ಠ 100 ಮಂದಿ ಯುವಜನರಿಗೆ ನಮ್ಮ ಸಾಂಪ್ರದಾಯಿಕ ಬೆಳೆಗಳಾದ ಸಿರಿಧಾನ್ಯಗಳು ಮತ್ತು ಜೋಳದ ಮೂಲಕ ಮೂಲಕ ಉದ್ಯೋಗ ಒದಗಿಸುವ ಯೋಜನೆ ಹಾಕಿಕೊಂಡಿದ್ದೇನೆ. ಅದರ ಮೂಲಕ ಅವರನ್ನು ಪುನಃ ಕೃಷಿಯತ್ತ ಸೆಳೆಯುವ ಉಪಾಯ ಮಾಡುತ್ತಿದ್ದೇನೆ."

ನಾವು ತೆಲಂಗಾಣದ ಸಂಗರೆಡ್ಡಿಜಿಲ್ಲೆಯ ಗಂಗಾಪುರಗ್ರಾಮದ ಶ್ರೀ ವೀರ್ ಶೆಟ್ಟಿಯವರೊಂದಿಗಿದ್ದೆವು. ರೈತರಾಗಿದ್ದ ಅವರು ಉದ್ಯಮಿಯಾಗಿ ಪರಿವರ್ತನೆ ಹೊಂದುವ ಹಾದಿಯಲ್ಲಿದ್ದಾರೆ. ಆತ ತಮ್ಮದೇ ಆದ ಆಹಾರ ಸಂಸ್ಕರಣಘಟಕ, ಸಿರಿಧಾನ್ಯಗಳನ್ನಾಧರಿಸಿದ ರೆಡಿ ಟು ಈಟ್ ಆಹಾರತಯಾರಿಕಾ ಘಟಕವನ್ನು ಸಿದ್ಧಪಡಿಸಿಕೊಳ್ಳುತ್ತಿದ್ದಾರೆ. ಇನ್ನು ಮೂರು ನಾಲ್ಕು ತಿಂಗಳುಗಳಲ್ಲಿ ಈ ಘಟಕ ಪೂರ್ಣಗೊಳ್ಳಲಿದೆ. ಇವರು ಹೈದರಾಬಾದಿನಲ್ಲಿ ಅಂಗಡಿ ಹಾಗೂ ಹೋಟೆಲ್ ಹೊಂದಿದ್ದಾರೆ. ಅಲ್ಲಿ ಸಿರಿಧಾನ್ಯಗಳ ಉತ್ಪನ್ನಗಳನ್ನು ಮಾರಾಟಮಾಡುತ್ತಿದ್ದಾರೆ. ಸಜ್ಜೆಯರೊಟ್ಟಿ, ಜೋಳದ ರೊಟ್ಟಿ, ಹಲವು ಧಾನ್ಯಗಳಿಂದ ತಯಾರಿಸಿದ ಲಡ್ಡು, ಪೂರ್ಣಪೋಲಿ, ಮಿಲೆಟ್ ಮಾಲ್ಟ್ ಇತ್ಯಾದಿಗಳನ್ನು ಮಾರುತ್ತಾರೆ. ಅಲ್ಲಿಗೆ ಪ್ರತಿನಿತ್ಯ 200 – 300 ಗ್ರಾಹಕರು ಭೇಟಿ ನೀಡುತ್ತಾರೆ. ಈ ಮಳಿಗೆ ಹಾಗೂ ಹೋಟೆಲ್ ಮೂಲಕ ಶೆಟ್ಟಿಯವರು ಒಂದೆಡೆ ನಗರ ಪ್ರದೇಶದ ಗ್ರಾಹಕರನ್ನು ಆರೋಗ್ಯಪೂರ್ಣ ಆಹಾರ ತಿನ್ನಲು ಉತ್ತೇಜಿಸಿದರೆ ಮತ್ತೊಂದೆಡೆ ರೈತರು ಸಿರಿಧಾನ್ಯಗಳನ್ನು ಬೆಳೆಯಲು ಪ್ರೋತ್ಸಾಹಿಸುತ್ತಿದ್ದಾರೆ.

*ವಿವಿಧ ಸಿರಿಧಾನ್ಯಗಳ ಉತ್ಪನ್ನಗಳ ಪ್ರದರ್ಶನ*





*ಒರಿಸ್ಸಾದ ರೈತರಿಗೆ ಸಿರಿಧಾನ್ಯಗಳ ರೊಟ್ಟಿ ತಯಾರಿಕೆಯ ಪ್ರಾತ್ಯಕ್ಷಿಕೆ ನೀಡುತ್ತಿರುವುದು*

ಕುಟುಂಬದ ಮೂವರು ಅಣ್ಣತಮ್ಮಂದಿರಲ್ಲಿ ಶೆಟ್ಟಿಯವರೇ ಹಿರಿಯರು. ಹತ್ತನೆಯ ತರಗತಿಯವರೆಗೆ ಓದಿದ ನಂತರ ಇವರು ಕುಟುಂಬ ನಿರ್ವಹಣೆಗಾಗಿ ದುಡಿಯಲು ಹೋಗಬೇಕಾಯಿತು. ಚಾಲಕರಾಗಿ ತಮ್ಮ ವೃತ್ತಿಜೀವನ ಆರಂಭಿಸಿದ ಶೆಟ್ಟಿಯವರು, 2005ರಿಂದ ಜೋಳ ಬೆಳೆಯುವತ್ತ ತಮ್ಮ ಗಮನಕೇಂದ್ರೀಕರಿಸಿದರು. 2007ರಲ್ಲಿ ಹೈದರಾಬಾದಿನಲ್ಲಿ ಜೋಳದ ರೊಟ್ಟಿ ಮಾರುವ ಸಣ್ಣ ಅಂಗಡಿಯೊಂದನ್ನು ತೆರೆದರು. ಆ ಸಮಯದಲ್ಲಿ ಜನರಿಗೆ ಜೋಳ ಮತ್ತಿತರ ಸಿರಿಧಾನ್ಯಗಳ ಬಳಕೆಯ ಲಾಭಗಳ ಅರಿವಿರಲಿಲ್ಲ. ಹಾಗಾಗಿ ಅವರ ಪ್ರಯತ್ನ ವಿಫಲವಾಯಿತು. ಅವರು ತಮ್ಮ ಅಂಗಡಿಯನ್ನು ಮತ್ತೊಂದೆಡೆ ಅಂದರೆ ಗ್ರಾಹಕರು ಹೆಚ್ಚಾಗಿ ಬರುವ ಸ್ಥಳಕ್ಕೆ ಸ್ಥಳಾಂತರಿಸಲು ಯೋಚಿಸಿದರು. ಅಲ್ಲಿಗೆ ಸಕ್ಕರೆ ಕಾಯಿಲೆಯ ಗ್ರಾಹಕರು ಹೆಚ್ಚಾಗಿ ಬರುತ್ತಿದ್ದರು. ನಂತರ ಅವರು ಎಸ್ಎಸ್ಭವಾನಿ ಫುಡ್ಸ್ ಅನ್ನು ದೊಡ್ಡಮಟ್ಟದಲ್ಲಿ ಆರಂಭಿಸಿದರು. ಅಗತ್ಯ ಸೌಲಭ್ಯಗಳನ್ನು ಹೊಂದಿದ್ದ ಅಡುಗೆಕೋಣೆಯಲ್ಲಿ ಉದ್ದೇಶಿತ ತಿನಿಸುಗಳನ್ನು ತಯಾರಿಸುವ ಚಿಕ್ಕ ಹೋಟೆಲ್ ಆರಂಭವಾಯಿತು. ಸಿರಿಧಾನ್ಯಗಳನ್ನು ಬಳಸಿ ಸಿದ್ಧಪಡಿಸಲಾದ ಊಟದೊಂದಿಗೆ ಹೋಟೆಲಿನ ಗೋಡೆಯ ಮೇಲೆ ಸಿರಿಧಾನ್ಯಗಳ ಪೌಷ್ಟಿಕಾಂಶಗಳ ವಿವರ ಮತ್ತು ಲಾಭಗಳನ್ನು ತಿಳಿಸುವ ಭಿತ್ತಿಪತ್ರಗಳನ್ನು ಅಂಟಿಸಿದ್ದಾರೆ. ಗ್ರಾಹಕರಲ್ಲಿ ಸಿರಿಧಾನ್ಯಗಳ ಬಳಕೆಯಿಂದಾಗುವ ಲಾಭಗಳ ಬಗ್ಗೆ ಅರಿವು ಮೂಡಿಸುವುದು ಅವರ ಉದ್ದೇಶ.

ಶೆಟ್ಟಿಯವರು ರೊಟ್ಟಿ ಮಾಡುವ ಯಂತ್ರವೊಂದನ್ನು ವಿನ್ಯಾಸಗೊಳಿಸಿದ್ದಾರೆ. ಬೆಂಗಳೂರಿನಲ್ಲಿ ವಿನ್ಯಾಸಗೊಂಡಿರುವ ಈ ಯಂತ್ರ ಗಂಟೆಗೆ 500 ರೊಟ್ಟಿಗಳನ್ನು ಮಾಡುತ್ತದೆ. ಇದರಿಂದ ತಮ್ಮ ಅಂಗಡಿಯಲ್ಲಿ ಪ್ರತಿದಿನ 2,000 – 3,000 ರೊಟ್ಟಿಗಳನ್ನು ಮಾರುವುದು ಸಾಧ್ಯವಾಗಿದೆ. ಅವರ ಅಂಗಡಿಯಿಂದ ರಫ್ತು ಏಜೆನ್ಸಿಯ ಮೂಲಕ ದುಬೈಗೆ ಪೂರನ್ಪೊಲಿಯನ್ನು ರಫ್ತು ಮಾಡಲಾಗುತ್ತದೆ ಮತ್ತು ಆಸ್ಟ್ರೇಲಿಯಾಗೆ ಒಣರೊಟ್ಟಿಗಳನ್ನು ರಫ್ತು ಮಾಡಲಾಗುತ್ತದೆ. ಈ ರೊಟ್ಟಿಗಳು ಆರು ತಿಂಗಳ ಕಾಲ ಹಾಳಾಗದೆ ಇರಬಲ್ಲವು. ಪ್ರತಿತಿಂಗಳು ಸುಮಾರು 2,000 ರೊಟ್ಟಿಗಳು ಮತ್ತು 300–400 ಪೂರನ್ಪೊಲಿಗಳು ಬೇರೆಡೆಗೆ ರಫ್ತಾಗುತ್ತವೆ.

2016ರಲ್ಲಿ ಶೆಟ್ಟಿಯವರು ಸಿರಿಧಾನ್ಯಗಳನ್ನು ಬೆಳೆವ ರೈತರೊಂದಿಗೆ ಕೆಲಸ ಮಾಡಲು ಸ್ವಯಂ ಶಕ್ತಿ ಅಗ್ರಿ ಫೌಂಡೇಶನ್ ಸಂಸ್ಥೆಯನ್ನು ಆರಂಭಿಸಿದರು. ಈ ಫೌಂಡೇಶನ್ ಮೂಲಕ ಅವರು ರೈತರಿಗೆ ಅಗತ್ಯವಾದ ಸಲಕರಣೆ/ಸಲಹೆಗಳನ್ನು ನೀಡುತ್ತಾರೆ. ಉತ್ತಮ ಇಳುವರಿ ಪಡೆಯಲು ಅನುಸರಿಸಬೇಕಾದ ವಿಧಾನಗಳ ಕುರಿತು ತರಬೇತಿ ನೀಡುತ್ತಾರೆ. ರೈತರು ಬೆಳೆದ ಬೆಳೆಗಳನ್ನು ಉತ್ತಮ ಬೆಲೆ ನೀಡಿ ಕೊಂಡುಕೊಳ್ಳುತ್ತಾರೆ. ಈ ಫೌಂಡೇಶನ್ಎಂ.ಎಸ್. ಸ್ವಾಮಿನಾಥನ್ ರಿಸರ್ಚ್ ಫೌಂಡೇಶನ್ನೊಂದಿಗೆ ಸೇರಿ ಕೊರಪುಟ್ಜಿಲ್ಲೆಯ 500 ಜನಬುಡಕಟ್ಟು ರೈತರನ್ನು ತಲುಪಿದೆ. ಅವರಿಗೆ ಸಿರಿಧಾನ್ಯಗಳ ವಿವಿಧ ಉತ್ಪನ್ನಗಳಾದ ಲಡ್ಡು, ಶ್ಯಾವಿಗೆ, ಚಿವಾಡ, ರೊಟ್ಟಿ ಇತ್ಯಾದಿಗಳನ್ನು ತಯಾರಿಸುವ ವಿಧಾನದ ಕುರಿತು ತರಬೇತಿ ನೀಡಲಾಗುತ್ತದೆ. ಕೃಷಿಗೆ ಸಂಬಂಧಿಸಿದ ವಿವಿಧ ಸಂಗತಿಗಳಾದ ಬೆಳೆಗಳಿಗೆ ತಗುಲುವ ಕಾಯಿಲೆಗಳನ್ನು ತಡೆಗಟ್ಟುವ ಬಗೆ, ಮಳೆನೀರು ಕೊಯ್ಲು, ಎರೆಹುಳುಗೊಬ್ಬರ ತಯಾರಿಕೆ, ಏರೋಬಿಕ್ಗೊಬ್ಬರ ತಯಾರಿಕೆ,ಮಣ್ಣಿನ ಸಾವಯವಗುಣ ವೃದ್ಧಿಸುವುದು, ವಿವಿಧ ಬಿತ್ತನೆ ವಿಧಾನಗಳು – ಇತ್ಯಾದಿಗಳ ಕುರಿತು ತರಬೇತಿ ಕೊಡಲಾಗುತ್ತದೆ.

ಇದಲ್ಲದೇ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮಿಲೆಟ್ಸ್ ರಿಸರ್ಚ್‌ನ ಅಧಿಕಾರಿಗಳೊಡನೆ ಸೇರಿ ಮತ್ತೊಂದು ಯೋಜನೆಯಲ್ಲಿ ತೆಲಂಗಾಣದ ಸಂಗಾರೆಡ್ಡಿಜಿಲ್ಲೆಯ 8 ಹಳ್ಳಿಗಳ 1000 ರೈತರೊಂದಿಗೆ ಶೆಟ್ಟಿಯವರು ಕೆಲಸಮಾಡುತ್ತಿದ್ದಾರೆ. 'ಒಂದು ಕೆಜಿ ಬೀಜವನ್ನು ಕೊಳ್ಳಲು ರೈತರು ನಗರಕ್ಕೆ ಹೋಗಬೇಕಾಗುತ್ತದೆ. ಅಲ್ಲಿಗೆ ಹೋದಾಗಲೂ ಅವರಿಗೆ ತಾವು ಕೊಳ್ಳುತ್ತಿರುವ ಬೀಜದ ಗುಣಮಟ್ಟ ಹೇಗಿದೆ ಎನ್ನುವುದು ತಿಳಿಯುವುದಿಲ್ಲ. ನಾವು ಅವರ ಮನೆಬಾಗಿಲಿಗೆ ಬೀಜಗಳನ್ನು ಪೂರೈಸುತ್ತೇವೆ. ಮಾರುಕಟ್ಟೆಯಲ್ಲಿನ ಬೆಲೆ ಹಾಗೂ ಬೇಡಿಕೆಗಳನ್ನು ಆಧರಿಸಿ ನಾವು ಅವರಿಗೆ ಯಾವ ಸಮಯದಲ್ಲಿ ಯಾವ ಬೆಳೆ ಬೆಳೆಯಬೇಕು ಎಂದು ಸಲಹೆ ನೀಡುತ್ತೇವೆ'. ರೈತರಿಂದ ಬೆಳೆಯನ್ನು ಸಂಗ್ರಹಿಸಿದ ಬಳಿಕ ಆಹಾರ ಉತ್ಪನ್ನಗಳಿಗೆ, ಮೇವಿಗೆ ಹಾಗೂ ಇನ್ನಿತರ ಉದ್ದೇಶಗಳಿಗೆ ತಕ್ಕಹಾಗೆ ಅದನ್ನು ವಿಂಗಡಿಸಲಾಗುತ್ತದೆ. ಮನುಷ್ಯರ ಬಳಕೆಗೆ ಸೂಕ್ತವಾದುದನ್ನು ಉಳಿಸಿಕೊಂಡು ಉಳಿದದ್ದನ್ನು ಬೀಜತಯಾರಿಕಾ ಕಂಪನಿಗಳಿಗೆ, ಜಾನುವಾರು ಮೇವು ಉತ್ಪಾದನಾ ಕಂಪನಿಗಳಿಗೆ ಮತ್ತು ಎಥನಾಲ್ ಉತ್ಪಾದನಾ ಕಂಪನಿಗಳಿಗೆ ಮಾರಾಟ ಮಾಡಲಾಗುತ್ತದೆ.

ಸಿರಿಧಾನ್ಯಗಳ ಆರೋಗ್ಯದ ಲಾಭಗಳನ್ನು ವಿವರಿಸುತ್ತಾ ಶೆಟ್ಟಿಯವರು




*ಪ್ರದರ್ಶನದ ವಿವಿಧ ಉತ್ಪನ್ನಗಳನ್ನು ವಿವರಿಸುತ್ತಿರುವುದು*

ಹೇಳುತ್ತಾರೆ 'ನನ್ನ ಗ್ರಾಹಕರಲ್ಲಿ 60% ಮಂದಿ ಐಟಿಯಲ್ಲಿ ಕೆಲಸ ಮಾಡುತ್ತಿರುವ ಯುವ ಉದ್ಯೋಗಿಗಳು. ಅವರೆಲ್ಲ ಸ್ಥೂಲಕಾಯ/ಬೊಜ್ಜು ಮತ್ತು ಮಧುಮೇಹದಂತಹ ಆರೋಗ್ಯದ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಉಳಿದ ಗ್ರಾಹಕರು ಮಧ್ಯವಯಸ್ಕರು ಅಥವ ವಯಸ್ಸಾದವರು. ಅವರಿಗೆ ಅವರದೇ ಆದ ಆರೋಗ್ಯದ ಸಮಸ್ಯೆಗಳಿವೆ. ಆರೋಗ್ಯದ ಕಾಳಜಿ ವಹಿಸುವ ಗ್ರಾಹಕರ ಪ್ರಮಾಣ ಅತ್ಯಲ್ಪ. ಜೀವನಶೈಲಿಯ ದೆಸೆಯಿಂದಲೇ ಹೆಚ್ಚುತ್ತಿರುವ ಕಾಯಿಲೆಗಳಿಗೆ ವೈದ್ಯರು ಸಿರಿಧಾನ್ಯಗಳನ್ನಾಧರಿಸಿದ ಪಥ್ಯವನ್ನು ಅನುಸರಿಸಲು ರೋಗಿಗಳಿಗೆ ಸಲಹೆ ನೀಡುತ್ತಿದ್ದಾರೆ'.

ಹೆಚ್ಚಿನ ಆದಾಯವಿಲ್ಲದಿರುವುದರಿಂದ ರೈತರು ಸಿರಿಧಾನ್ಯಗಳನ್ನು ಬೆಳೆಯಲು ಹಿಂದೇಟು ಹಾಕುತ್ತಿದ್ದಾರೆ. 'ನಗರ ಪ್ರದೇಶಗಳಲ್ಲಿನ ಗ್ರಾಹಕರಲ್ಲಿ ಸಿರಿಧಾನ್ಯಗಳ ಬಳಕೆಯ ಕುರಿತು ಮಾಹಿತಿ/ಪ್ರಚಾರವನ್ನು ಹೆಚ್ಚಿಸಿದಲ್ಲಿ ಬೇಡಿಕೆ ಹೆಚ್ಚಾಗುತ್ತದೆ. ಆಗ ಹೆಚ್ಚಿನ ರೈತರನ್ನು ಸಿರಿಧಾನ್ಯಗಳ ಕೃಷಿಯತ್ತ ಹೊರಳುವಂತೆ ಮಾಡಬಹುದು" ಎನ್ನುತ್ತಾರೆ ಶೆಟ್ಟಿಯವರು.

ಸರ್ಕಾರವು ಕೂಡ ಸಿರಿಧಾನ್ಯಗಳ ಬಳಕೆಯನ್ನು ಹೆಚ್ಚಿಸಲು ಬಹಳಷ್ಟು ಕೆಲಸ ಮಾಡಬಹುದು. ಸರ್ಕಾರಿ ಸಂಕೀರ್ಣಗಳಾದ ಸೆಕ್ರೆಟರಿಯೆಟ್‌ನಂತಹ ಕಛೇರಿಗಳ ಆವರಣದ ಕ್ಯಾಂಟೀನುಗಳಲ್ಲಿ, ಬುಡಕಟ್ಟುಕಲ್ಯಾಣ ಇಲಾಖೆಯ ವತಿಯಿಂದ ನಡೆಸುವ ಆಶ್ರಮದ ಶಾಲೆಗಳು; ವಸತಿ ಶಾಲೆಗಳಾದ ಜವಾಹರ ನವೋದಯ ಶಾಲೆಗಳು, ಸಮಾಜಕಲ್ಯಾಣ ಇಲಾಖೆಯ ವತಿಯಿಂದ ವಿವಿಧ ರಾಜ್ಯಗಳಲ್ಲಿ ನಡೆಸಲಾಗುತ್ತಿರುವ ಶಾಲೆಗಳು; ಮಧ್ಯಾಹ್ನದ ಬಿಸಿಯೂಟದ ಯೋಜನೆ – ಇಲ್ಲೆಲ್ಲ ಸಿರಿಧಾನ್ಯಗಳ ಬಳಕೆಯನ್ನು ಪರಿಚಯಿಸಿ, ಪ್ರೋತ್ಸಾಹಿಸಬಹುದು. ನಗರ ಪ್ರದೇಶಗಳಲ್ಲಿ ಸಿರಿಧಾನ್ಯಗಳ ಸಂಸ್ಕರಣೆ ಮತ್ತು ವ್ಯಾಪಾರಿ ಮಳಿಗೆಗಳ ಉದ್ಯಮಕ್ಕೆ ಉತ್ತೇಜನ ನೀಡಬಹುದು. 'ಕೆಲವು ರಾಜ್ಯಸರ್ಕಾರಗಳು ಉದಾಹರಣೆಗೆ ತಮಿಳುನಾಡು ಮತ್ತು ತೆಲಂಗಾಣ ಸರ್ಕಾರಗಳು ಜನರಿಗೆ ರಿಯಾಯ್ತಿ ದರದಲ್ಲಿ ಊಟವನ್ನು ಒದಗಿಸುತ್ತದೆ. ಅಲ್ಲಿನ ಊಟ ಅನ್ನ ಮತ್ತು ಸಾಂಬಾರ್. ಇಲ್ಲಿ ಅಕ್ಕಿಗೆ ಬದಲಾಗಿ ಈ ಧಾನ್ಯಗಳನ್ನು ಬಳಸಬಹುದು'ಎಂದು ಶೆಟ್ಟಿಯವರು ಹೇಳುತ್ತಾರೆ. ರೈತರು ತಮ್ಮ ಭೂಮಿಯಲ್ಲಿ ಕನಿಷ್ಠ 10% ಸಿರಿಧಾನ್ಯಗಳನ್ನು ತಾವು ಬೆಳೆಯುವ ಇತರ ಬೆಳೆಗಳೊಂದಿಗೆ ಬೆಳೆಯಲು ಸರ್ಕಾರವು ಪ್ರೋತ್ಸಾಹಿಸಬೇಕು. ಆಹಾರ ಸಂಸ್ಕರಣ ಯಂತ್ರಗಳ ಮೇಲೆ ತೆರಿಗೆ ವಿನಾಯಿತಿಯನ್ನೂ, ಸಿರಿಧಾನ್ಯಗಳಿಗೆ ಬೆಂಬಲ ಬೆಲೆಯನ್ನೂ ನೀಡಬೇಕು, ಸರ್ಕಾರಿ ಸ್ವಾಮ್ಯದ ಕ್ಯಾಂಟೀನು, ಹಾಸ್ಟೆಲುಗಳಲ್ಲಿ ಇವುಗಳನ್ನು ಕೊಳ್ಳುವ, ಬಳಸಲು ಉತ್ತೇಜಿಸುವ ಮೂಲಕ ಸರ್ಕಾರವು ರೈತರಿಗೆ ನೆರವು ನೀಡಬಹುದು.

'ಜನ ಸಿರಿಧಾನ್ಯಗಳನ್ನು ಬಳಸಲು ಬಯಸುತ್ತಾರೆ. ಆದರೆ ಅವು ಸುಲಭವಾಗಿ ಸಿಗುತ್ತಿಲ್ಲ' ಎನ್ನುತ್ತಾರೆ. ಗಂಗಾಪುರ ಹಳ್ಳಿಯಲ್ಲಿನ ಅವರ ಆಹಾರ ಸಂಸ್ಕರಣ ಘಟಕ ಬಹುದೊಡ್ಡ ಕನಸೊಂದಕ್ಕೆ ಬುನಾದಿಯಾಗಿದೆ. ಗೋದಾಮು, ರೈತರ ತರಬೇತಿ ಕೇಂದ್ರ, ಸಂಶೋಧನಾ ಘಟಕ, ಸಾವಯವ ಕೃಷಿ ಹೀಗೆ ಹಲವು ಯೋಜನೆಗಳು ಶೆಟ್ಟಿಯವರ ಕನಸಿಗೆ ರೆಕ್ಕೆ ಜೋಡಿಸಿ ಜೀವತುಂಬಲು ಕಾಯುತ್ತಿವೆ. ಈ ಘಟಕದಿಂದ ಸಿರಿಧಾನ್ಯಗಳನ್ನಾಧರಿಸಿದ ಉತ್ಪನ್ನಗಳನ್ನು ನಗರದ ಗ್ರಾಹಕರಿಗೆ, ವಿವಿಧ ನಗರಗಳ ಮಳಿಗೆಗಳಿಗೆ ಮತ್ತು ವಿದೇಶದ ಮಾರುಕಟ್ಟೆಗಳಿಗೆ ಪೂರೈಸಲು ಅವರು ಯೋಜಿಸಿದ್ದಾರೆ. 'ಪ್ರಪಂಚದಾದ್ಯಂತ ಆರೋಗ್ಯಕರ ಜೀವನಶೈಲಿಯನ್ನು ಬಯಸುವ ಗ್ರಾಹಕರನ್ನು ತಲುಪಬೇಕೆಂಬುದು ನನ್ನಾಸೆ. ಆ ಮೂಲಕ ನನ್ನ ರೈತಮಿತ್ರರಿಗೆ ಲಾಭ ದೊರಕಿಸಿಕೊಡಬಹುದು' ಎನ್ನುವುದು ಶೆಟ್ಟಿಯವರ ಆಶಯ. ■

**Amit Chakravarty**
Chief of Staff to the Director General
ICRISAT
Patancheru 502324 Telangana, India
E-mail: a.chakravarty@cgiar.org

**ಆಂಗ್ಲ ಮೂಲ**
ಲೀಸಾ ಇಂಡಿಯಾ, ಸಂಪುಟ 19, ಸಂಚಿಕೆ 4, ಡಿಸೆಂಬರ್ 2017